ಶ್ರೀ ವಾಟಾಳ್ ನಾಗರಾಜ್ :– ನನ್ನ ಇಡೀ ರಾಜಕೀಯ ಜೀವನದಲ್ಲಿ ಜಾತಿ ಮಾಡಿಲ್ಲ. ಯಾವುದೇ ಜಾತಿ ಇಲ್ಲದೇ ಇರತಕ್ಕಂಥ ಮನುಷ್ಯ ನಾನು. ಇದೇ ಸ್ಥಳದಲ್ಲಿ ಗೋಪಾಲಗೌಡರು, ನಾನು, ಬಂಗಾರಪ್ಪ ಎಲ್ಲ ಕುಳಿತಿದ್ದೇವೆ. ನಮ್ಮ ಜೀವನದಲ್ಲಿ ಜಾತಿ ಮಾಡಿಲ್ಲ. ಜಾತಿ ಎಂದು ಏಕೆ ಮಾಡಬೇಕು. ಜಾತಿ ಮಾಡುವುದಾಗಿದ್ದರೆ ಈ ಪರಿಸ್ಥಿತಿಯಲ್ಲಿ 17 ವರ್ಷ ಆದ ಮೇಲೆ ಮತ್ತೆ ಅಧಿಕಾರಕ್ಕೆ ಹೋರಾಟ ಮಾಡಿ ಬರಬೇಕಾಗಿರಲಿಲ್ಲ. ಜಾತಿ ಹೆಸರು ಹೇಳಿಕೊಂಡು ಚಮಚಾಗಿರಿ ಮಾಡಿದ್ದರೆ ಏನು ಬೇಕಾದರೂ ಆಗಬಹುದಿತ್ತು.

(ಗೊಂದಲ)

ಉಪಾಧ್ಯಕ್ಷರು :– ಶ್ರೀಯುತ ನಂಜಂಡಸ್ವಾಮಿಯವರೇ ತಾವು ದಯವಿಟ್ಟು ಪ್ರಾರಂಭ ಮಾಡಿ.

ನಿಯಮ 68ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯ ಬಗ್ಗೆ

† ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) :– ಮಾನ್ಯ ಸಭಾಧ್ಯಕ್ಷೆಣಿಯವರೇ, ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಈಗ ಸ್ವಲ್ಪ ಸಮಯದ ಹಿಂದೆ ನಾನು ಕಾನೂನು ಉಲ್ಲಂಘನೆ ಮಾಡಿದ ಬಗ್ಗೆ ತಮ್ಮ ಕ್ಷಮಾಪಣೆ ಮತ್ತು ಸದಸ್ಯರು ಕ್ಷಮಾಪಣೆಯನ್ನು ಕೇಳುತ್ತೇನೆ. ಅದರ ಉದ್ದೇಶ ಇಷ್ಟೇ; ನಮ್ಮ ಜೊತೆ ಇರುವಂತಹ ಸರ್ಕಾರೀ ನೀತಿಗಳು ಯಾವ ರೀತಿ ತಾರತಮ್ಯದ ಅಂಶಗಳನ್ನು ಒಳಗೊಂಡಿದೆ ಎಂದು ಎತ್ತಿ ತೋರಿಸುವುದಕ್ಕೋಸ್ಕರವಾಗಿ ನಾನು ಕಾನೂನು ಭಂಗ ಮಾಡಬೇಕಾಯಿತು. ಅಂತಹ ವೈತ್ಯಾಸದ ಅಂಶಗಳು ಬರಗಾಲಕ್ಕೆ ಸಂಬಂಧಪಟ್ಟಂತೆ ಕೂಡ ಇವೆ. ಈಗ ಎರಡು ಮೂರು ದಿವಸದಿಂದ ನಡೆಯುತ್ತಿರುವ ಚರ್ಚೆಯಲ್ಲಿ ಬರಗಾಲವೆಂದು ಘೋಷಿಸುವ ಸೂತ್ರಗಳ ಬಗ್ಗೆ ಬಹಳ ಚರ್ಚೆ ಆಯಿತು. ಬರಗಾಲವೆಂದು ಘೋಷಣೆ ಮಾಡಬೇಕಾದರೆ ಏನು ಸೂತ್ರಗಳನ್ನು ಅಳವಡಿಸಿಕೊಂಡಿದ್ದೇವೆ? ಇದರ ಬಗ್ಗೆ ಚರ್ಚೆ ಮಾಡಿದಂತಹ ನಮ್ಮ ಸ್ನೇಹಿತರುಗಳು ಅಣೆವಾರಿ ಪದ್ಧತಿ ಬಗ್ಗೆ ಬಹಳ ಟೀಕೆಗಳನ್ನು ಮಾಡಿದ್ದಾರೆ. ಹಾಗೆಯೇ ನಮ್ಮ ವಿಲೇಜ್ ಆಕೌಂಟೆಂಟ್‌ಗಳು ಕೆಲಸ ಮಾಡುವ ರೀತಿ ಬಗ್ಗೆಯೂ ಸಹ ಟೀಕೆಯನ್ನು ಮಾಡಿದ್ದಾರೆ. ಹಾಗೆಯೇ ನಮ್ಮ ಐ.ಎ.ಎಸ್. ಅಧಿಕಾರಿಗಳು ಹೇಗೆ ಸ್ಯಾಟಲೈಟ್ ಚಿತ್ರ ಉಪಯೋಗಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆನ್ನುವ ಬಗ್ಗೆಯೂ ಟೀಕೆಗಳು ಬಂದಿವೆ. ಇವೊತ್ತು ಕೂಡ ಈ ಸದನದ ಮುಂದೆ ಬಂದಂಥ ಪ್ರಶ್ನೆಗಳು, ಅದರಲ್ಲಿ ಅಣೆವಾರಿ ಬಗ್ಗೆ ...

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಮೀಪದಲ್ಲಿ ವಿಧಾನಮಂಡಲದ ಅಧಿಕಾರಿಯವರು ಮತ್ತು ಮಾನ್ಯ ಸದಸ್ಯರಿಬ್ಬರು ಮಾತನಾಡುತ್ತಿದ್ದರು)

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಈ ಚಟುವಟಿಕೆ ಇದ್ದರೆ ನಾನು ಮಾತನಾಡುವುದಿಲ್ಲ... ನಾನು ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ.

ಉಪಾಧ್ಯಕ್ಷರು :– ಮಾನ್ಯ ಮಂತ್ರಿಗಳು ಕೇಳುತ್ತಿದ್ದಾರೆ. ತಾವು ಮುಂದುವರೆಸಿ.

ಶ್ರೀ ಎಸ್. ಬಂಗಾರಪ್ಪ :– ತಾವು ಮಾತನಾಡಬಾರದು ಎಂದು ನನ್ನ ಅಭಿಪ್ರಾಯ ಅಲ್ಲ. ಈ ಚರ್ಚೆಯಲ್ಲಿ ಎಷ್ಟು ಜನರು ಮಾತನಾಡಿದ್ದಾರೆ. ಇನ್ನೂ ಎಷ್ಟು ಜನರು ಮಾತನಾಡುವವರು ಇದ್ದಾರೆ ಎಂದು ನಾನು ಸಂಬಂಧಪಟ್ಟವರಲ್ಲಿ ಹಾಗೂ ವಿರೋಧಿ ಪಕ್ಷದ ನಾಯಕರನ್ನು ಕೇಳುತ್ತಾ ಇದ್ದೇನೆ. ತಾವು ತಮ್ಮ ಮಾತನ್ನು ದಯಮಾಡಿ ಮುಂದುವರಿಸಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ನಾನು ಚರ್ಚೆ ಪ್ರಾರಂಭವಾದ ನಡುವೆ ಒಂದು ಸಾರಿ ಹೇಳಿದ್ದೆ. ಕಂದಾಯ ಸಚಿವರ ಜೊತೆಗೆ ಬರಗಾಲದ ಬಗ್ಗೆ ಚರ್ಚೆ ನಡೆಯುವಾಗ ಮುಖ್ಯವಾಗಿ ನೀರಾವರಿ ಮಂತ್ರಿಗಳು, ಸಹಕಾರಿ ಮಂತ್ರಿಗಳು, ವಿದ್ಯುತ್ ಮಂತ್ರಿಗಳು, ಕೈಗಾರಿಕಾ ಮಂತ್ರಿಗಳು ಇದ್ದರೆ ನಾವು ಇಂಥ ನಿಷ್ಪ್ರಯೋಜಕ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಹಾಕಿಕೊಳ್ಳುವುದನ್ನು ಕೈಬಿಟ್ಟು, ಅದರ ಬದಲಾಗಿ ಶಾಶ್ವತ ಬರಗಾಲ

ಪರಿಹಾರದ ಬಗ್ಗೆ ಒಂದು ಅರ್ಥಪೂರ್ಣವಾದ ಚರ್ಚೆಯನ್ನು ಎಲ್ಲರೂ ಸೇರಿ ಮಾಡಬಹುದು ಎಂದು ಆ ಒಂದು ಆಸೆಯಿಂದ ಹೇಳುತ್ತಿದ್ದೇನೆ. ಮುಖ್ಯಮಂತ್ರಿಯವರು ಈಗ ಈ ಎಲ್ಲಾ ಖಾತೆಗಳನ್ನು ಇನ್ನೂ ತಮ್ಮಲ್ಲಿ ಇಟ್ಟುಕೊಂಡಿರುವುದರಿಂದ ನಾನು ಮಾತನಾಡುವಾಗ ನನ್ನ ಮಾತುಗಳನ್ನು ಅವರು ಕೇಳಿಸಿಕೊಂಡರೆ ಸ್ವಲ್ಪ ಹೆಚ್ಚಿನ ಪ್ರಯೋಜನವಾಗಬಹುದು ಎಂದು ಈ ಮಾತುಗಳನ್ನು ಹೇಳುತ್ತಾ ಇದ್ದೇನೆ. ಆ ಖಾತೆಗಳು ತಮ್ಮ ಹತ್ತಿರ ಇವೆ. ಈ ಎಲ್ಲಾ ಖಾತೆಗಳು ಒಟ್ಟಿಗೆ ಸೇರಿ ಕೆಲಸ ಮಾಡಿದರೆ ಶಾಶ್ವತ ಬರಗಾಲ ಪರಿಹಾರ ಅಥವಾ ಬರಗಾಲವೇ ಇಲ್ಲದಂಥ ಕರ್ನಾಟಕವನ್ನು ನಾವು ಸೃಷ್ಟಿಮಾಡಲು ಸಾಧ್ಯವಾಗುತ್ತದೆ. ನಾನು ಬರಗಾಲ ಎಂದು ಸರಕಾರದವರು ಘೋಷಿಸುವ ಸೂತ್ರದ ಬಗ್ಗೆ ಮಾತನಾಡುತ್ತಾ ಇದ್ದೆ. ಇವೊತ್ತಿನ ದಿವಸ ಎಷ್ಟೋ ಪ್ರಶ್ನೆಗಳಿಗೆ ನಮ್ಮ ಅಧಿಕಾರಿಗಳು ಕಾಲಾವಕಾಶ ಕೇಳಿದಂಥ ಒಂದು ಘಟನೆ ನಡೆಯಿತು. ಅದರಲ್ಲಿ ಬರೀ ಶೇಕಡಾವಾರು ಪ್ರಶ್ನೆಗೆ ಉತ್ತರಕ್ಕಾಗಿ ಕಾಲಾವಕಾಶ ಕೇಳಿದ್ದಾರೆ ಎನ್ನುವ ಮಾತು ಬಂತೇ ಹೊರತು ಯಾವ ಪ್ರಶ್ನೆಗಳಿಗೆ ಕಾಲಾವಕಾಶವನ್ನು ಕೇಳಿದ್ದಾರೆ ಎಂಬುದನ್ನು ನಮ್ಮ ಸದಸ್ಯರುಗಳು ಗಮನಿಸಿಲ್ಲ. Damage due to heavy rains in Bidar. ಇದರ ಬಗ್ಗೆ ಅಂಕಿಅಂಶಗಳನ್ನು ಕೊಡಲು ಕಾಲಾವಕಾಶ ಬೇಕು. Drought in Hassan Dist. ಇದಕ್ಕೆ ಉತ್ತರ ಕೊಡಬೇಕಾದರೆ ಕಾಲಾವಕಾಶ ಬೇಕು. Loss of life due to heavy rains; ಇದಕ್ಕೆ ಇತ್ತರ ಕೊಡಬೇಕಾದರೆ ಕಾಲಾವಕಾಶ ಬೇಕು. ಇದನ್ನು ನಾನು ಏತಕ್ಕೆ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ ಅಂದರೆ, ಬರಗಾಲ ಎಂದು ಘೋಷಣೆ ಮಾಡುವುದಕ್ಕೆ ಇರುವಂಥ ಸೂತ್ರಗಳ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿದರು. ಆದರೆ ಬರಗಾಲ ಎಂದು ಘೋಷಣೆ ಮಾಡದಿರುವುದಕ್ಕೆ ಕಾರಣಗಳನ್ನು ನಾವು ತಿಳಿದುಕೊಳ್ಳಬೇಕು. ಹಲವಾರು ಮಾನ್ಯ ಸದಸ್ಯರುಗಳ ಆಲೋಚನೆ ಪ್ರಕಾರ ಕಂದಾಯ ವಸೂಲಿ ಮಾಡುವುದಕ್ಕೋಸ್ಕರವಾಗಿ ಬರಗಾಲವನ್ನು ಘೋಷಣೆ ಮಾಡುವುದಿಲ್ಲ ಎಂಬ ಒಂದು ಅಭಿಪ್ರಾಯ ಇದೆ. ಆದರೆ ಅದಕ್ಕಿಂತ ಒಳ ಕಾರಣಗಳು ಬೇರೆ ಇವೆ: ಅದನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ನನ್ನ ಕೈಯಲ್ಲಿ ಇರುವುದು; Circulars of the Agriculture Credit Department, Reserve Bank of India, Volume-III, Page No. 1274.

ಏತಕ್ಕೋಸ್ಕರ ಬರಗಾಲ ಎಂದು ಘೋಷಣೆ ಮಾಡುವುದಿಲ್ಲ ನಮ್ಮ ಸರ್ಕಾರ? ಏತಕ್ಕೋಸ್ಕರ ಕೆಲವೇ ಪ್ರದೇಶಗಳನ್ನು ಬರಗಾಲವೆಂದು ಘೋಷಣೆ ಮಾಡುತ್ತಾರೆ. ಬರಗಾಲ ನಿಜವಾಗಿ ಇದ್ದರೂ ಕೂಡ ಬೇರೆ ಪ್ರದೇಶಗಳನ್ನು ಘೋಷಣೆ ಮಾಡಿಲ್ಲ ಎನ್ನುವುದಕ್ಕೆ ಕಾರಣ ಹೇಳುತ್ತೇನೆ. ಕಾರಣ ಇಷ್ಟೇನೇ? 1974ರ ಜುಲೈ 15ನೇ ತಾರೀಖು ರಿಸರ್ವ್ ಬ್ಯಾಂಕ್‌ನ ಸ್ಟಡಿ ಟೀಮ್ ಒಂದು ತೀರ್ಮಾನ ಮಾಡಿ ಇಂಡಿಯಾ ದೇಶದ ಎಲ್ಲಾ ರಾಜ್ಯ ಸರ್ಕಾರಗಳ ಕಾರ್ಯದರ್ಶಿ, ಸಹಕಾರ ಇಲಾಖೆಗೆ ಕಳಿಸಿದಂತಹ ಒಂದು ಸುತ್ತೋಲೆ; ಪೇಜ್ ನಂ. 1274 ರಿಂದ ಪ್ರಾರಂಭ ಆಗಿ 1276ರಲ್ಲಿ 'Relief in respect of succesive natural calamities,' ಇದು 1974ರಲ್ಲಿ ತೀರ್ಮಾನ ಆಗಿದ್ದು; ರಿಸರ್ವ್ ಬ್ಯಾಂಕ್‌ನವರು ಇದನ್ನು ದೇಶದ ಎಲ್ಲಾ ರಾಜ್ಯ ಸರ್ಕಾರಗಳೂ ಜಾರಿಗೆ ತರಬೇಕು ಎಂದು ಆದೇಶವನ್ನು ಕಳಿಸಿದ್ದಾರೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ ರಿಸರ್ವ್ ಬ್ಯಾಂಕಿನ ಈ ಸುತ್ತೋಲೆಯನ್ನು ಇಡೀ ಇಂಡಿಯಾ ದೇಶದಲ್ಲಿ ಯಾವ ರಾಜ್ಯ ಸರ್ಕಾರವೂ ಜಾರಿಗೆ ತಂದಿಲ್ಲ. ಇದಕ್ಕೆ ಕಾರಣ ಇಷ್ಟೇನೇ. Relief in cases of frequent Natural calamities & successive natural calamities ಎನ್ನುವುದರ ಬಗ್ಗೆ ರಿಸರ್ವ್ ಬ್ಯಾಂಕಿನ ರೆಸಲ್ಯೂಷನ್. ಇದರಲ್ಲಿ ಸಣ್ಣ ರೈತರಿಗೆ ಕೊಡುವಂತಹ ರಿಲೀಫ್‌ಗಳನ್ನು ರಿಸರ್ವ್ ಬ್ಯಾಂಕಿನ ಸ್ಟಡಿ ಟೀಮ್ ಲಿಸ್ಟ್ ಮಾಡಿದೆ.

"II. Relief in times of successive natural calamities if a Member is indebted only in respect of short-term loans is as follows :

i) For two successive failures :

No relief may be given other than by waive of rescheduling the aggregate of the two short-term loans as a five year loans.

ii) For two successive failures :

a) Right off of one short-term (conversion) loan and the interest thereon and spreading over of the other loans as a rescheduled loan for 5 years.

b) In the case of big farmers no right off is necessary. The reschedule loan should be spread over 5 years.

III. If in addition to the short-term loans, the borrower has to repay a normal medium term loan :

i) For one crop failure

Period of repayment of rescheduled loan need be spread over 6 years.

ii) For two successive failures :

a) Right off of one short-term (conversion) loan with interest due thereon for borrowers other than the big farmers and spreading over the remaining loans as rescheduled loan for 7 years.

b) For Big farmers, mere spreading over of the period of rescheduled loan to 6 years.

iii) For three successive failures :

a) Right off of two short-term (conversion) loans and the interest due thereon for borrowers other than big farmers and spreading over of the remaining loans as a rescheduled loan for 7 years.

b) No relief by way of right-off should be given to the big farmers."

ಈ ಕಾರಣಕ್ಕೆ ಕೆಲವು ಕಡೆ ಬರಗಾಲವೆಂದು ಘೋಷಣೆ ಮಾಡುವುದಿಲ್ಲ. 1974ನೇ ಇಸವಿ ಆದ ಮೇಲೆ ನಮ್ಮ ರಾಜ್ಯದ ಅಥವಾ ಈ ದೇಶದ ಎಲ್ಲಾ ವಿಲೇಜ್ ಆಕೌಂಟೆಂಟ್‌ಗಳು ಆಣೆವಾರಿ ಪದ್ಧತಿಯನ್ನು ಕೈಬಿಟ್ಟಿದ್ದಾರೆ. ಕಾರಣ ಇಷ್ಟೇ, ಏಕೆಂದರೆ ನೀವು ಆಣೆವಾರಿ ಪದ್ಧತಿಯನ್ನು ಮಾಡಿದರೆ ಸಹಕಾರ ಇಲಾಖೆಯಲ್ಲಿ ಈ ಎಲ್ಲಾ ಸೌಲಭ್ಯಗಳನ್ನು ರಿಸರ್ವ್ ಬ್ಯಾಂಕ್ ಏನು ಹೇಳಿದೆ, ಆ ಎಲ್ಲ ಸೌಲಭ್ಯಗಳನ್ನು ಸಣ್ಣ ರೈತರಿಗೆ ಕೊಡಬೇಕಾಗುತ್ತದೆ. ಆದ್ದರಿಂದ ಆಣೆವಾರಿ ಪದ್ಧತಿ ಹಳ್ಳಿ ಹಳ್ಳಿಗೆ ಹೋಗಿ ಮಾಡಬೇಡಿ; ನೀವು ಇರುವ ಕಡೆಯಲ್ಲಿಯೇ ಆರು ಆಣೆ ಬೇಕಾದರೆ ಬರೆ, 8 ಆಣೆ ಬೇಕಾದರೆ ಬರೆ ಎಂಬ ಆದೇಶವನ್ನು ನಮ್ಮ ಜಿಲ್ಲಾಧಿಕಾರಿಗಳು ಎಲ್ಲಾ ವಿಲೇಜ್ ಆಕೌಂಟೆಂಟ್‌ಗಳಿಗೆ ಕೊಟ್ಟಿರುವುದು. ಇದೇ ಕಾರಣ ಅಲ್ಲದೇ ಬೇರೆ ಕಾರಣ ಇಲ್ಲ. ಭೂ ಕಂದಾಯ ಈ ಸರ್ಕಾರಕ್ಕೆ ಬೇಕಾಗಿಲ್ಲ. ಆದರೆ ರಿಸರ್ವ್ ಬ್ಯಾಂಕಿನ ಆದೇಶಗಳನ್ನು ಜಾರಿಗೆ ತರುವುದಕ್ಕೆ ಈ ಸರ್ಕಾರಕ್ಕೆ ಇಚ್ಛೆ ಇಲ್ಲ. ಇದರ ಒಂದು ಪ್ರತಿಯನ್ನು ನಾನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತಿದ್ದೇನೆ. ಮತ್ತೆ ಮಾನ್ಯ ಸಚಿವರು ಸಭೆಗೆ ಕೊಟ್ಟಿರುವಂಥ ಹೇಳಿಕೆ ಬರಗಾಲ ಪರಿಹಾರದ ಬಗ್ಗೆ, ಎಷ್ಟು ಲೆಕ್ಕ ಹಾಕಿದರೂ ಕೂಡಾ ಒಂದು ತಾಲ್ಲೂಕಿಗೆ ಕೇವಲ 15 ಲಕ್ಷ ರೂಪಾಯಿ ಬರಬಹುದು. ಏನು ಲೆಕ್ಕಾಚಾರ ಹಾಕಿದ್ದಾರೋ ಗೊತ್ತಿಲ್ಲ. ನನ್ನ ಲೆಕ್ಕಾಚಾರದ ಪ್ರಕಾರ ಇದು ಎರಡು–ಮೂರು ಲಕ್ಷ ರೂಪಾಯಿ ಆದರೂ ಆಯಿತು, 15 ಲಕ್ಷ ರೂಪಾಯಿ ಆದರೂ ಆಯಿತು, ಇದರ ವ್ಯತ್ಯಾಸ ಪರಿಣಾಮಕಾರಿಯಾದಂಥದ್ದು ಏನೂ ಇಲ್ಲ. ಇದಕ್ಕೆ ಕಾರಣವಿಷ್ಟೆ; ಒಂದು ಋತಂತ್ರದ ಹಿಂದೆ ಮತ್ತೊಂದು ಋತಂತ್ರವನ್ನು ನೇಯತಕ್ಕಂಥದ್ದು ಸರ್ಕಾರದ ನೀತಿ. ಆಣೆವಾರಿ ಬರೆಯುವುದು ಬೇಡ. ಬರಗಾಲ ಎನ್ನುವುದನ್ನು ಘೋಷಣೆ ಮಾಡುವುದು ಬೇಡ. ಅಂದಮೇಲೆ ಕೆಲಾಮಿಟಿ ಫಂಡ್ ಎಷ್ಟು ಇರಬೇಕು ಎನ್ನುವುದನ್ನು ಈ ಅಧಿಕಾರಿಗಳೇ ತೀರ್ಮಾನ ಮಾಡುವವರು. ಕರ್ನಾಟಕದಲ್ಲಿ ಬರಗಾಲವೇ ಇಲ್ಲ ಎಂದ ಮೇಲೆ ನ್ಯಾಚುರಲ್ ಕೆಲಾಮಿಟೀಸ್ ಫಂಡ್ ಏತಕ್ಕೆ ಬೇಕು? ಕೆಲಾಮಿಟಿ ಫಂಡ್ ಎಷ್ಟು ಇದೆ ನಿಮ್ಮಲ್ಲಿ ಸ್ವಲ್ಪ ದಯವಿಟ್ಟು ಹೇಳಿ ನೋಡೋಣ. ಒಟ್ಟು ಬಜೆಟ್‌ನ ಶೇಕಡವಾರು ಅಂಶ ನೈಸರ್ಗಿಕ ಹಾನಿಗಳಿಗೆ ತೆಗೆದಿಟ್ಟಿದ್ದೀರಿ, ಹೇಳಿ ನೋಡೋಣ.

ಮೇವಿಗಾಗಿ ಎಷ್ಟು ಲಕ್ಷ ರೂಪಾಯಿಯನ್ನು ಎತ್ತಿ ಇಟ್ಟಿದ್ದೀರಿ, ಹೇಳಿ ನೋಡೋಣ. ನಾವು ಎಷ್ಟು ಜನಸಂಖ್ಯೆ ಇದ್ದೇವೆ ಕರ್ನಾಟಕದಲ್ಲಿ, ಅಷ್ಟೇ ದನಸಂಖ್ಯೆ ಇದೆ. ಬರಗಾಲ ಬಂದಾಗ ದನಗಳಿಗೆ ಮೇವು ಕೊಡುವುದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಬೇಕು, ಹಣ ಎಷ್ಟು ಬೇಕಾಗಬಹುದು ಎನ್ನುವುದನ್ನು ಸ್ವಲ್ಪ ಆಲೋಚನೆ ಮಾಡಬೇಕು. ದನಗಳಿಗೆ ಮೇವನ್ನು ಕೊಡುವುದಕ್ಕೆ, ನೈಸರ್ಗಿಕ ಹಾನಿ ಆದಂಥ ಕಾಲದಲ್ಲಿ ಲಕ್ಷದಲ್ಲಿ ಲೆಕ್ಕವನ್ನು ಇಟ್ಟುಕೊಟ್ಟಿದ್ದಾರೆ, ಕೊಡುತ್ತಿದ್ದೀರಿ. ಏಕೆಂದರೆ ಅಣ್ವಾರಿ ಪ್ರಕಾರ ಬರಗಾಲವೇ ಇಲ್ಲ ಕರ್ನಾಟಕದಲ್ಲಿ; ಆದರೆ ಸರ್ಕಾರ ಏನೂ ಮಾಡಿಲ್ಲ ಎನ್ನುವ ತನ್ನ ವೈಫಲ್ಯವನ್ನು ಹೇಳಿಕೊಳ್ಳುವಾಗ ಸಮರ್ಥನೆಗೆ ಕರ್ನಾಟಕದಲ್ಲಿ ಬರಗಾಲ ಇದೆ ಎಂದು ಇದೇ ಸದನದಲ್ಲಿ ಕಳೆದ ಆರು ವರ್ಷಗಳಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದ ಭಾಷಣದಲ್ಲಿ ಹೇಳಿಕೊಂಡಿದ್ದಾರೆ. ಆರು ವರ್ಷಗಳಿಂದ ಬರಗಾಲ ಇದೆ ಎಂದು ಆಯವ್ಯಯದ ಭಾಷಣವನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೊಂಡಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಭಾಷಣದಲ್ಲಿ ಕರ್ನಾಟಕದಲ್ಲಿ ಬರಗಾಲ ಇದೆ, ಆದರೆ ಕಂದಾಯ ಇಲಾಖೆಯ ರೆಕಾರ್ಡ್ಸ್‌ನಲ್ಲಿ ಬರಗಾಲ ಇಲ್ಲ. ಆರು ವರ್ಷಗಳಿಂದ 1400 ಕೋಟಿ ರೂಪಾಯಿ ಆಹಾರ ಉತ್ಪಾದನೆಗೆ ನಷ್ಟವಾಗಿದೆ ಕರ್ನಾಟಕದಲ್ಲಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಕಂದಾಯ ಇಲಾಖೆಯ ದಾಖಲೆಯಲ್ಲಿ ಬರಗಾಲ ಇಲ್ಲ. ಆ ಕಾರಣ ನಿಮ್ಮ ಕೆಲಾಮಿಟಿ ಫಂಡ್‌ನ ಮೊತ್ತ ಕೂಡಾ ಕಡಿಮೆ ಇದೆ. ನಮ್ಮ ಸ್ನೇಹಿತರ ಲೆಕ್ಕಾಚಾರದ ಪ್ರಕಾರ ತಾಲ್ಲೂಕಿಗೆ ಮೂರು ಲಕ್ಷ ರೂಪಾಯಿ, ಏತಕ್ಕೆ ಇದು? ಬಿ.ಡಿ.ಒ. ಸ್ವಲ್ಪ ಬಡವನಾಗಿದ್ದಾನೆ, ಅವನಿಗೆ ಒಂದು ಸ್ವಲ್ಪ ಪಾಕೆಟ್ ಮನಿ ಕೊಡಬೇಕೆನ್ನುವ ಕಾರ್ಯಕ್ರಮವೇ ಹೊರತು, ಇದು ಬರಗಾಲದ ಪರಿಹಾರದ ಕಾರ್ಯಕ್ರಮ ಅಲ್ಲ. ಇಂಥ ಕಾರ್ಯಕ್ರಮದ ಬಗ್ಗೆ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ವರ್ಷಕ್ಕೇ ಇದು ಕೊನೆಯಾಗಬೇಕು. ಕನಿಷ್ಠ ಇನ್ನು ಮುಂದಿನ ವರ್ಷವಾದರೂ ಬರಗಾಲ ಇಲ್ಲದೇ ಇರತಕ್ಕಂಥ ಕರ್ನಾಟಕವನ್ನು ನೋಡುವುದಕ್ಕೆ ಕಾರ್ಯಕ್ರಮವನ್ನು ನಾವು ಹಾಕಬೇಕು. ಅದೇನೂ ಕಷ್ಟದ ಕೆಲಸವಲ್ಲ. ಆದರೆ ಕಂದಾಯ ಮಂತ್ರಿಗಳ ಜೊತೆಗೆ ಸಹಕಾರಿ ಮಂತ್ರಿ, ನೀರಾವರಿ ಮಂತ್ರಿ, ವಿದ್ಯುಚ್ಛಕ್ತಿ ಮಂತ್ರಿ, ಕೈಗಾರಿಕಾ ಮಂತ್ರಿಗಳು ಒಟ್ಟಾಗಿ ಸೇರಿ ಒಂದು ಸಮಗ್ರವಾದ ಕಾರ್ಯಕ್ರಮವನ್ನು ಹಾಕಿದರೆ ಮುಂದಿನ ವರ್ಷ ಕರ್ನಾಟಕದಲ್ಲಿ ಬರಗಾಲ ಇಲ್ಲದೇ ಇರತಕ್ಕಂಥ ಒಂದು ಸ್ಥಿತಿಯನ್ನು ನಾವು ನೋಡಬಹುದು. ಮೊದಲನೆಯದಾಗಿ ನೀವು ಒಂದು ಕೆಲಸವನ್ನು ಮಾಡಿ. ಹೊಸ ಕೆಲಸವನ್ನು ಮಾಡದಿದ್ದರೆ ಬೇಡ. ನಮ್ಮ ತಾತಂದಿರ ಕಾಲದಲ್ಲಿ ಏನು ಒಂದು ವ್ಯವಸ್ಥೆ ಇತ್ತು, ಆ ವ್ಯವಸ್ಥೆಯನ್ನು ಈಗ ನಾವು ಏನು ಹಾಳು ಮಾಡಿದ್ದೇವೆ, ಅದನ್ನು ದುರಸ್ತಿ ಮಾಡತಕ್ಕಂಥ ಕೆಲಸವನ್ನು ಮಾಡಿ ಸಾಕು.

ಈಗ ತಮ್ಮ ಮುಂದೆ ಓದುತ್ತಿರುವುದು ಮೈಸೂರ್ ಗೆಜೆಟಿಯರ್ 1929, ವಾಲ್ಯೂಂ–3 ಪುಟ 156ರಲ್ಲಿ ನೀರಾವರಿ ಬಗ್ಗೆ ದಾಖಲೆ ಇದೆ. ಎಷ್ಟರಮಟ್ಟಿಗೆ ಮಳೆನೀರನ್ನು ನಮ್ಮ ಪೂರ್ವಜರು ಒಂದು ಹನಿ ನೀರು ಹಾಳಾಗದ ರೀತಿಯಲ್ಲಿ ಹಿಡಿದಿಟ್ಟಿದ್ದರು ಎಂಬುದು ಇದರಿಂದ ತಿಳಿಯುತ್ತದೆ.

"It may be conjectured that the first civilised inhabitants taking possession of the higher grounds constructed the small tanks or Kattes on the minor rivulets and step by step followed this down to the largest streams arresting and impounding the water at every convenient site by throwing earthen bunds across the valley. As according to the plans followed it was possible to advance only steady downwards from the watershed to the various streams to the extremities, it may be conceived how fast time would be expended in creating a single series of several hundred and in some cases over a thousand reservoirs linked together in the fashion and forming such a continuous chain of works that not a single drop of water falling on the catchment is lost in seasons of drought but little in ordinary seasons."

ಶ್ರೀ ಜಿ. ಶಿವಣ್ಣಜಪ್ಪ :– ಮೈಕ್ರೋ ಸೆಡ್, ಮತ್ತು ವಾಟರ್‌ಸೆಡ್ ಕಾರ್ಯಕ್ರಮ ಈಗ ನಡೆಯುತ್ತಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಅದು ಎಷ್ಟರ ಮಟ್ಟಿಗೆ ನಡೆಯುತ್ತಿದೆ ಎಂಬ ಬಗ್ಗೆ ಆಮೇಲೆ ಅದಕ್ಕೆ ಬರೋಣ. Major Sankey, one of the first engineers of the State, who devoted his attention to the systematic repairs of the tanks, has stated that. "To such an extent as the principle of storage has been followed that it would now require some ingenuity to discover a site within this great area suitable for a new tank." ಒಂದು ಹೊಸ ಕೆರೆ ಮಾಡುವುದಕ್ಕೆ ಸ್ಥಳ ಹುಡುಕುವುದಕ್ಕೆ ಕಷ್ಟವಾಗುವ ರೀತಿಯಲ್ಲಿ ಈ ಸ್ಟೋರೇಜ್‌ನ ವ್ಯವಸ್ಥೆಯನ್ನು ಮಾಡಿ ಇಟ್ಟಿದ್ದರು, ಆ ಕೆಲಸವನ್ನು ಮೊದಲು ನಾವು ಮಾಡಬೇಕು. ಈ ಸದನಕ್ಕೆ ಬಂದಾಗಿನಿಂದಲೂ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ, ಕನಿಷ್ಠ ಒಂದು ವರ್ಷ ನಿಮ್ಮ ದೊಡ್ಡ ನೀರಾವರಿ ಕಾರ್ಯಕ್ರಮವನ್ನು ಮುಂದೂಡಿ ಎಂದು; Only for one year, moratorium on major irrigation and concentrate on mini and micro irrigation. ಅದರಲ್ಲಿ ಈ ಕೆರೆ ಕಟ್ಟೆಗಳನ್ನು ದುರಸ್ತಿ ಮಾಡುವುದು, ಕೆರೆ ಹೂಳೆತ್ತುವ ಕೆಲಸವನ್ನು ನೀವು ಮಾಡಿದರೆ, ಸುಮಾರು ಕಾಲು ಭಾಗ ಬರಗಾಲವನ್ನು ಪರಿಹಾರ ಮಾಡಿದಂತಾಗುತ್ತದೆ. ಡಾ. ನಂಜಪ್ಪನವರು ಮಾತನಾಡುತ್ತಿರುವಾಗ ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್‌ರವರು ಹಳ್ಳಿಗಳಿಗೆ ಎಷ್ಟು ಭಾಗ ಹಣಬೇಕು, ಎಷ್ಟು ಭಾಗ ಹಣ ಬೇಕು ಎಂದು ಕೇಳುತ್ತಿದ್ದರು. ಆದರೆ ಡಾ. ನಂಜಪ್ಪನವರು ನಾಚಿಕೊಂಡು ಎಷ್ಟು ಭಾಗ ಹಣ ಬೇಕೆಂದು ಕೇಳಲಿಲ್ಲ, ಏಕೆ ನಾಚಿಕೆಗೊಂಡರೊ ಗೊತ್ತಿಲ್ಲ. ಕರ್ನಾಟಕದ ನೈಸರ್ಗಿಕ ಸಂಪತ್ತು ಏನಿದೆ ಅಥವಾ ಬೇರೆ ಸಂಪತ್ತು ಏನಿದೆ. ಅದರಲ್ಲಿ ಶೇಕಡ 75 ಭಾಗ ನಮ್ಮ ಹಳ್ಳಿಯ ಜನರಿಗೆ ಬೇಕು. ಆವತ್ತು ಮಾತ್ರ ಡಾ. ನಂಜಪ್ಪನವರು ನಾಚಿಕೆಗೊಂಡರು. ಆದರೆ ಅವರ ತಂದೆಯವರ ಆಸ್ತಿಯಲ್ಲಿ ಪಾಲು ಕೇಳುವಾಗ ಅವರು ನಾಚಿಕೊಂಡಿಲ್ಲ ಅಂತ ಕಾಣುತ್ತದೆ. ನಾನು ಕೇಳುವುದೇನೆಂದರೆ, ಕರ್ನಾಟಕದಲ್ಲಿ ನೈಸರ್ಗಿಕ ಸಂಪತ್ತು ಮತ್ತು ಇತರೇ ಸಂಪತ್ತು ಏನಿದೆ ಅದರಲ್ಲಿ ಶೇಕಡ 75 ಭಾಗ ಗ್ರಾಮಾಂತರ ಪ್ರದೇಶಕ್ಕೆ ಬೇಕು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಡಾ. ನಂಜಪ್ಪನವರು ಮಾತನಾಡುವಾಗ ಹಳ್ಳಿಯಲ್ಲಿರತಕ್ಕ ಕಚ್ಚಾ ವಸ್ತುಗಳು ಹಳ್ಳಿಯಿಂದ ಆಚೆಗೆ ಹೋಗಬಾರದು, ಸಿದ್ಧವಸ್ತುವಾಗಿ ಹೋಗಬೇಕು ಎಂದು; ಅದು ಹೇಗೆ ಸಾಧ್ಯ? ಹಳ್ಳಿಗಳಲ್ಲಿಯೇ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕು. ಏತಕ್ಕೆ ಇದನ್ನು ಪೀಠಿಕೆಯಾಗಿ ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು 60 ಸಾವಿರ ಪಂಪುಸೆಟ್ಟುಗಳಿಗೆ ಈ ಸಾರಿ ನಾನು ವಿದ್ಯುಚ್ಛಕ್ತಿ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಅದು ಮಾರ್ಚ್ 31, 1991ರೊಳಗೆ. ಆ ಕೆಲಸವನ್ನು ಒಂದು ದಿವಸ ತಡ ಆಗದ ರೀತಿಯಲ್ಲಿ ಮಾಡಬೇಕು. ಸನ್ಮಾನ್ಯ ಕಂದಾಯ ಮಂತ್ರಿಗಳು. ನನಗೆ ಇದರ ಬಗ್ಗೆ ಬಹಳ ಅನುಮಾನ ಇದೆ. ಏಕೆಂದರೆ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಂದಾಯ ಮಂತ್ರಿಗಳಾಗುವುದಕ್ಕೆ ಮುಂಚೆ ಕಂದಾಯ ಮಂತ್ರಿಗಳಾಗಿದ್ದವರು ಒಂದು ತಿಂಗಳ ಹಿಂದೆ ಒಂದು ಸಭೆಯನ್ನು ಕರೆದಿದ್ದರು. ನನ್ನನ್ನು ಕರೆದಿದ್ದರು. "ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ನಾನು ಈಗ ಒಂದು ದೊಡ್ಡ ಕಾರ್ಯಕ್ರಮ ಹಾಕಿದ್ದೇನೆ, ತುರ್ತು ಕಾರ್ಯಕ್ರಮ ಹಾಕಿದ್ದೇನೆ, I am taking up this programme of drinking water on a war-footing" ಎಂದು ಈ ಪದಗಳಿಗೆ ಅರ್ಥ ಏನು ಎಂದು ಇವೊತ್ತು ನನಗೆ ಗೊತ್ತಾಗುತ್ತಿಲ್ಲ. What is the meaning of war-footing?

ಮೊನ್ನೆ ಧಾರವಾಡಕ್ಕೆ ಹೋಗಿದ್ದೆ, ಅಲ್ಲಿ ನಾನು ವಾರ್‌ಫುಟಿಂಗ್ ರೀತಿಯಲ್ಲಿ ಕುಡಿಯುವ ನೀರಿನ ಬಗ್ಗೆ ಕಾರ್ಯಕ್ರಮ ಆಗುತ್ತಿದೆಯೇ, ಇದಕ್ಕೆ ಹಣ ಬಂದಿದೆಯೇ ಎಂದು ಅಧಿಕಾರಿಗಳನ್ನು ಕೇಳಿದೆ. ಅಲ್ಲಿ ಹಣ ಬಂದಿಲ್ಲ ಎಂದು ಹೇಳಿದರು. This is the way in which you implement your programmes on a war-footing, ಈ 60 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಡುವ ಬಗ್ಗೆ ನನಗೆ ಸಂಪೂರ್ಣ ಅನುಮಾನ ಇದೆ. ಆದರೆ ದಯವಿಟ್ಟು ಇದನ್ನು ಮಾಡಿ, ನನಗೆ ಅನುಮಾನಕ್ಕೆ ಅವಕಾಶ ಕೊಡಬೇಡಿ. ಈ 60 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಟ್ಟರೆ, ಅರ್ಧ ಬರಗಾಲ ಪರಿಹಾರ ಆದ ಹಾಗೆ; ಆ ಕೆಲಸವನ್ನು ಮಾಡಲು ದಯಮಾಡಿ ಒಂದು ದಿವಸ ತಡಮಾಡಬಾರದು. ಡಾ. ನಂಜಪ್ಪನವರಂತಹ ನಮ್ಮ ಸ್ನೇಹಿತರಿಗೆ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಹೌದು ನಿಜ, ಈ ಕಚ್ಚಾ ವಸ್ತುಗಳು ಹಳ್ಳಿಯಿಂದ ಆಚೆಗೆ ಹೋಗಬಾರದು. ನಾವು ಬೆಳೆಯತಕ್ಕ ಹತ್ತಿಯಾಗಲಿ, ಎಣ್ಣೆಕಾಳುಗಳು ಆಗಲಿ, ರೇಷ್ಮೆಯಾಗಲಿ, ಎಲ್ಲವೂ ಸಿದ್ಧ ವಸ್ತುಗಳಾಗಿ ಆಚೆಗೆ ಹೋಗಬೇಕು.

(ಶ್ರೀ ಎಸ್.ಹೆಚ್. ಕೌಜಲಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇದು ಯಾವಾಗ ಸಾಧ್ಯ ಅಂದರೆ, ಕರ್ನಾಟಕ ರಾಜ್ಯದಲ್ಲಿ ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ, ಅದರಲ್ಲಿ ಶೇಕಡಾ 75 ಭಾಗ ಗ್ರಾಮಾಂತರ ಪ್ರದೇಶಕ್ಕೆ ಆನ್ನುವಂಥ ಕಾನೂನು ಆದಾಗ ಮಾತ್ರ ಸಾಧ್ಯ. ಆ ಕಾನೂನು ಮಾಡುವಂಥ ಸರ್ಕಾರ ನಿಮ್ಮದು ಎಂದು ನಾನು ಸವಾಲು ಹಾಕುತ್ತಿದ್ದೇನೆ. ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರೆಲ್ಲಾ ನಮ್ಮ ರೈತರ ಮಕ್ಕಳೇ. ಎಲ್ಲ ರೈತರ ಮಕ್ಕಳು ಈ ಅಧಿವೇಶನದಲ್ಲಿ ಒಂದು ತೀರ್ಮಾನಕ್ಕೆ ಬರಬೇಕು. ಇಂತಹ ಒಂದು ಕಾನೂನು ಮಾಡೋಣ ಎಂದು, ಇದನ್ನು ಖತಕ್ಕೆ ಹೇಳುತ್ತಿದ್ದೇನೆಂದರೆ, ಈಗ ನಾನು ಯಾವುದಾದರೂ ಕಾರ್ಖಾನೆ ಹೆಸರು ಹೇಳಿ, ಮಾತನಾಡುವುದು ಇರಲಿ, ಸಾಲ್ಕೆದು ಲಕ್ಷ ರೂಪಾಯಿ ಲಿಫ್ಟ್ ಇರಿಗೇಷನ್ ಬಗ್ಗೆ ಮಾತನಾಡಿದ ಕೂಡಲೇ ಮಾನ್ಯ ಮಂತ್ರಿಗಳು ಏನು ಮಾತನಾಡುತ್ತಾರೆಂದರೆ ವಿದ್ಯುಚ್ಛಕ್ತಿ ಇಲ್ಲ ಎಂದು ಹೇಳುತ್ತಾರೆ. ಆದರೆ, ಆದೇ ಬೆಂಗಳೂರು ನಗರದಲ್ಲಿ ಒಂದು ಲಿಪ್‌ಸ್ಟಿಕ್ ಕಾರ್ಖಾನೆ ತೆಗೆಯಬೇಕೆಂದರೆ ವಿದ್ಯುಚ್ಛಕ್ತಿ ಸಿಕ್ಕುತ್ತದೆ. ತುಟಿಗೆ ಬಣ್ಣ ತಯಾರು ಮಾಡುವಂಥ ಕಾರ್ಖಾನೆಗೆ ವಿದ್ಯುಚ್ಛಕ್ತಿ ಕೊಡುವಂಥ ಸರ್ಕಾರವೇ ನಡೆದುಕೊಂಡು ಬಂದಿರುವುದು ಇಷ್ಟು ದಿವಸ. ಆಹಾರೋತ್ಪಾದನೆ ಮಾಡುತ್ತೇವೆ, ಒಂದು ಸಣ್ಣ ಖತ ನೀರಾವರಿ ಯೋಜನೆ ಮಾಡಬೇಕೆಂದರೆ ವಿದ್ಯುಚ್ಛಕ್ತಿ ಇಲ್ಲ. ಇದನ್ನು ಒಪ್ಪುತ್ತೀರಾ ರೈತರ ಮಕ್ಕಳೇ. ಎಲ್ಲಾ ರೈತರ ಮಕ್ಕಳು ಇದಕ್ಕೆ ಒಪ್ಪಿಗೆ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ. ಮಾನ್ಯ ಡಾ. ನಾಗಪ್ಪನವರು ತುಟಿಗೆ ಬಣ್ಣ ಬಹಳ ಅವಶ್ಯಕ ಎಂದು ಹೇಳುತ್ತಿದ್ದಾರೆ.

Dr. Y. Nagappa:- It is also a necessity. ಈಗ ತಾವು ಹೇಳುತ್ತಿರುವುದು 1929ನೇ ಗೆಜೆಟಿಯರ್ ಬಗ್ಗೆ. ಆಗ ಜನಸಂಖ್ಯೆ ಎಷ್ಟಿತ್ತು. ದನಗಳ ಸಂಖ್ಯೆ ಎಷ್ಟಿತ್ತು. ಆಗ ಎಷ್ಟು ಸಾವಿರ ಹೆಕ್ಟೇರ್ ಸಾಗುವಳಿ ಮಾಡುತ್ತಿದ್ದರು. ಈಗ ಇರತಕ್ಕ ಪರಿಸ್ಥಿತಿ ಹೇಗಿದೆ. ಈಗ ಇರತಕ್ಕ ಪರಿಸ್ಥಿತಿ ಬಗ್ಗೆ ಯಾವ ರೀತಿ ಮಾಡಬೇಕೆಂದು ನಾವೆಲ್ಲಾ ಯೋಚನೆ ಮಾಡಬೇಕು. ನಾನು ಸಹ ರೈತನ ಮಗ. ಈಗಿನ ಪರಿಸ್ಥಿತಿಗೆ ತಕ್ಕಂತೆ ನಾವು ಅಳವಡಿಸಬೇಕು. ಈಗ 1929ರ ಗೆಜೆಟಿಯರ್‌ನ್ನು ಈಗ ಅಳವಡಿಸಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಅಧ್ಯಕ್ಷರೆ, ಇಬ್ಬರು ಡಾಕ್ಟರುಗಳ ಮಧ್ಯೆ ನನಗೆ ಕಷ್ಟವಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನನಗೆ ಅನುಭವ ಇಲ್ಲ. ನಾನು ಅತ್ಯಂತ ಕಿರಿಯ ಸದಸ್ಯ. ಈ ಸದನಕ್ಕೆ ಮಾನ್ಯ ಸದಸ್ಯರು ಹೇಳಿಕೆ ಕೊಟ್ಟಿದ್ದರ ಹಿಂದೆ ಇರುವಂಥ ಒಂದು ಮರ್ಮ ನನಗೆ ಗೊತ್ತಾಗಲಿಲ್ಲ. ಆದರೆ ಈಗ ನನಗೆ ಗೊತ್ತಾಯಿತು. ತುಟಿ ಬಣ್ಣದ ವಿಚಾರ ಬಂದಾಗ ನಾನು ಮಾತನಾಡುತ್ತಿದ್ದೆ. ತಾವು ನನ್ನನ್ನು ವಿರೋಧಪಕ್ಷದ ಸದಸ್ಯರೆಂದು ತಿಳಿದುಕೊಳ್ಳಬಾರದು. ನಾನು ಇದನ್ನು ಖತಕ್ಕೆ ಹೇಳುತ್ತಿದ್ದೇನೆಂದರೆ, ಕೇವಲ ವಾದವನ್ನು ಮಾಡುವುದಕ್ಕೋಸ್ಕರವೇ ವಾದವನ್ನು ಮಾಡಬಾರದು. ತುಟಿ ಬಣ್ಣದ ಬಗ್ಗೆ ಬಹಳಷ್ಟು ನಾವು ಚರ್ಚೆಮಾಡಿದ್ದೇವೆ. ತುಟಿ ಬಣ್ಣದ ಕಾರ್ಖಾನೆ ಸ್ಥಾಪನೆಯಾಗುವುದಕ್ಕಿಂತ ಮುಂಚೆತವಾಗಿ ಈ ನಮ್ಮ ದೇಶದ ಹೆಣ್ಣುಮಕ್ಕಳಿಗೆ ತುಟಿ ಸರಿಯಾಗಿ ಮಾಡಬೇಕು. ತಾವು ನಮ್ಮ ಹಳ್ಳಿಗಳಿಗೆ ಬಂದು ನಮ್ಮ ಹೆಣ್ಣುಮಕ್ಕಳ ಮುಖಗಳನ್ನು ನೋಡಿ. ಅವರ ತಲೆಗಳಲ್ಲಿ ಎಣ್ಣೆ ಇಲ್ಲ. ತುಟಿಗಳಿಗೆ ಬಣ್ಣವನ್ನು ಹಚ್ಚಬೇಕಾದರೆ ತುಟಿಗಳನ್ನು ಹುಡುಕಬೇಕು. ಈ ಮಾತನ್ನು ನಾನು ಬಹಳ ಸಂಕಟದಿಂದ ಹೇಳುತ್ತಿದ್ದೇನೆ. ಇಂಥ ದುಃಸ್ಥಿತಿಯಲ್ಲಿ ನಮ್ಮ ಹಳ್ಳಿಗಳನ್ನು ಇಟ್ಟಿದ್ದೇವೆ, ಹಳ್ಳಿಯ ಹೆಣ್ಣುಮಕ್ಕಳನ್ನು ಇಟ್ಟಿದ್ದೇವೆ. ನಾನು ಕೇವಲ ತಮಾಷೆಗಾಗಿ ಹೇಳುತ್ತಿಲ್ಲ. ನಮ್ಮ ಹಳ್ಳಿ ಮಕ್ಕಳ ನ್ಯೂಟ್ರಿಷನ್ ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ತಿಳಿಯಬೇಕಾದರೆ ನಮ್ಮ ಅಂಗನವಾಡಿಗಳಲ್ಲಿ ಇರತಕ್ಕ ಮಕ್ಕಳನ್ನು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ. ನಾವು ಎಲ್ಲ ವಿಚಾರಗಳನ್ನೂ ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದೇವೆ. ಇದನ್ನು ನೀವು ಲಘುವಾಗಿ ತೆಗೆದುಕೊಂಡಷ್ಟೂ ಕರ್ನಾಟಕದಲ್ಲಿ ಬಹಳ ಬೇಗ ಬದಲಾವಣೆಯಾಗುತ್ತದೆಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಇನ್ನು ನಾವು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ ಶೇಕಡ 75 ಜನರು ಇರತಕ್ಕ ಹಳ್ಳಿಗಾಡಿಗೆ ಶೇಕಡ 75ರಷ್ಟು ವಿದ್ಯುಚ್ಛಕ್ತಿ ಕೊಡಬೇಕು. ಎಲ್ಲಿಯವರೆಗೆ ಇದು ಆಗುವುದಿಲ್ಲ, ಅಲ್ಲಿಯವರೆಗೂ ನೀವು ಬರಗಾಲವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಬರಗಾಲವನ್ನು ನಿರ್ಮೂಲನ ಮಾಡಬೇಕೆಂದು ತಮಗೆ ಆಸೆ ಇದ್ದರೆ ಈ ಕೆಲಸವನ್ನು ಮಾಡಬೇಕು. ಇದು ಒಂದಕ್ಕೊಂದು ಅಂಟಿಕೊಂಡಿರತಕ್ಕ ಕಾರ್ಯಕ್ರಮ. ಇದು ಒಂದಕ್ಕೊಂದು

ಅವಲಂಬಿಸಿಕೊಂಡಿರತಕ್ಕ ಕಾರ್ಯಕ್ರಮಗಳು. ಕೆರೆಗಳ ದುರಸ್ತಿ,, ಏತ ನೀರಾವರಿ, ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿ, ಇವುಗಳ ಜೊತೆಗೆ ಸಣ್ಣ ಕೈಗಾರಿಕೆಗಳ ಸ್ಥಾಪನೆ ಆಗಬೇಕೆಂದು ಏತಕ್ಕೆ ನಾನು ಹೇಳುತ್ತಿದ್ದೇನೆಂದರೆ, ಕಾರಣ ಇಷ್ಟೆ, ನಾವು 3 ಕೋಟಿ ರೈತರಿದ್ದೇವೆ. ಆದರೆ ಬೇಸಾಯ ಮಾಡುತ್ತಿರುವುದು ಕೇವಲ 2 ಕೋಟಿ ಎಕರೆ ಮಾತ್ರ. 3 ಕೋಟಿ ಜನ ರೈತರು 2 ಕೋಟಿ ಎಕರೆ ಭೂಮಿಯನ್ನು ಕರ್ನಾಟಕದಲ್ಲಿ ನಾವು ಬೇಸಾಯ ಮಾಡುತ್ತಿದ್ದೇವೆ. ಇದರಲ್ಲಿ ಶೇಕಡ 80 ಭಾಗ ಮಳೆ ಆಧಾರಿತ ಪ್ರದೇಶ. ಅಂದರೆ ತಲಾವಾರು 25 ಗುಂಟೆ ಭೂಮಿ ನಮ್ಮ ಕರ್ನಾಟಕದಲ್ಲಿರತಕ್ಕದ್ದು. ತಲಾವಾರು 25 ಗುಂಟೆ ಭೂಮಿ ಏನಿದೆ, ಇದು ಪೂರ್ತಿಯಾಗಿ ನೀರಾವರಿಯಾದರೆ 1 ವರ್ಷದಲ್ಲಿ 100 ದಿವಸ ಉದ್ಯೋಗ ಸಿಕ್ಕುತ್ತದೆ. ಇದರಲ್ಲಿ 52 ಭಾನುವಾರ ಹಬ್ಬ ಹರಿದಿನಗಳೆಲ್ಲವನ್ನೂ ಕಳೆದ ಮೇಲೆ ಇನ್ನು 200 ದಿನಗಳು ಖಾಲಿ ದಿನಗಳು ನಮಗೆ ಉಳಿಯುತ್ತವೆ. ಈ ಖಾಲಿ ದಿನಗಳು ಏದರ್ ಮ್ಯಾನ್‌ಡೇಸ್. ಈ ಖಾಲಿ ದಿವಸಗಳನ್ನು ಭರ್ತಿ ಮಾಡತಕ್ಕ ಕಾರ್ಯಕ್ರಮಗಳನ್ನು ನಾವು ಎಲ್ಲಿಯವರೆಗೆ ಹಾಕಿಕೊಳ್ಳುವುದಿಲ್ಲ ಅಲ್ಲಿಯವರೆಗೆ ಹಳ್ಳಿಗಳಿಂದ ಬಡತನವಾಗಲಿ, ಬರಗಾಲವಾಗಲಿ ಹೋಗುವುದಿಲ್ಲ; ನಮ್ಮಿಂದ ಕಚ್ಚಾ ವಸ್ತುಗಳು ಸಿದ್ಧವಸ್ತುಗಳಾಗಿ ಹೊರಗಡೆ ಹೋಗಬೇಕು. ಅಂಥ ಕೈಗಾರಿಕಾ ನೀತಿಯನ್ನು ತಾವು ರೂಪಿಸಿಕೊಂಡರೆ ಮಾತ್ರ ಹಳ್ಳಿಗಾಡಿನ ಜನರಿಗೆ ತಾವು ಕನಿಷ್ಟ 300 ದಿವಸಗಳ ಕೆಲಸವನ್ನು ಕೊಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬಹುದು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು).

ಮತ್ತೊಂದು ಕೆಲಸ ತಾವು ಮಾಡಬೇಕಾಗಿರುವುದು ಅಂದರೆ ಕೆರೆ ದುರಸ್ತಿ ಮತ್ತು ಬಾವಿ ನೀರಾವರಿ. ಈ ಎರಡನ್ನೂ ಒಂದೇ ಮಟ್ಟದಲ್ಲಿ ತಾವು ತೆಗೆದುಕೊಂಡು ಹೋಗಬೇಕಾದರೆ ಅಂತರ್ ಜಲವನ್ನು ತಾವು ಅತ್ಯಂತ ಎಚ್ಚರಿಕೆಯಿಂದ ಉಪಯೋಗಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಎಲ್ಲಾ ನೀರಾವರಿ ಬಾವಿಗಳಿಂದ ಫ್ಲಡ್ ಇರಿಗೇಷನ್ ಅಂತ ಏನು ಮಾಡುತ್ತೇವೆ ಅದನ್ನೇ ಮಾಡುತ್ತಿದ್ದೇವೆ. ಇದರಿಂದ ನೀರನ್ನು ನಾವು ಹಾಳುಮಾಡುತ್ತಿರುವುದಲ್ಲದೆ ಬೆಳೆಯನ್ನೂ ಕೂಡ ಹಾಳುಮಾಡುತ್ತಿದ್ದೇವೆ. ಬೆಳೆ ಯಾವುದಿದ್ದರೂ ಒಂದೇ ಪ್ರಮಾಣದಲ್ಲಿ ನೀರನ್ನು ಕೊಡುತ್ತಿದ್ದೇವೆ. ರಾಗಿಗೂ ಒಂದೇ ಪ್ರಮಾಣದಲ್ಲಿ ನೀರು ಸೇಂಗಾಕ್ಕೆ ಒಂದೇ ಪ್ರಮಾಣದ ನೀರು, ಕಬ್ಬಿಗೂ ಒಂದೇ ಪ್ರಮಾಣದ ನೀರು, ಮೆಣಸಿಗೂ ಒಂದೇ ಪ್ರಮಾಣದ ನೀರು ಕೊಡುವುದರಿಂದ ನೀರು ಹಾಳಾಗುತ್ತಿದೆ ಮತ್ತು ಇಳುವರಿ ಸಹ ಹಾಳಾಗುತ್ತಿದೆ. ಅಂತರ್ ಜಲವನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸುವುದಕ್ಕೋಸ್ಕರ ಹಿಂದೆ ಇದ್ದಂಥ ಸರ್ಕಾರ, ಹಿಂದೆ ಇದ್ದಂಥ ಕೃಷಿ ಮಂತ್ರಿಗಳು ಅವರಿಗೆ ಎಷ್ಟು ಮನವಿ ಮಾಡಿಕೊಂಡರು ಮಾಡಲಿಲ್ಲ. ಈಗಲಾದರೂ ತಾವು ಮಾಡುತ್ತೀರಾ, ನೋಡಿ... ಎರಡೇ ಎರಡು ಕಾರ್ಖಾನೆಗಳನ್ನು ನಾನು ಮಾಡಬೇಕೆಂದು ಕೇಳುತ್ತಿದ್ದೇನೆ. ಹನಿ ನೀರಾವರಿ ಕಾರ್ಖಾನೆ ಮತ್ತೊಂದು ತುಂತುರು ನೀರಾವರಿ ಕಾರ್ಖಾನೆ. ಸರ್ಕಾರಿ ಸ್ವಾಮ್ಯದಲ್ಲಿ ಆದರೂ ಮಾಡಿ ಸಹಕಾರಿ ಕ್ಷೇತ್ರದಲ್ಲಿ ಆದರೂ ಮಾಡಿ ಡ್ರಿಪ್ ಇರಿಗೇಷನ್ ಫ್ಯಾಕ್ಟರಿ ಸ್ಪಿಂಕ್ಲರ್ ಇರಿಗೇಷನ್ ಫ್ಯಾಕ್ಟರಿ; ಇದನ್ನು ಮಾಡಿ ನಮ್ಮ ಉತ್ಪಾದನೆಗೆ ಖರ್ಚು ಎಷ್ಟು ಬರುತ್ತದೆ, ಆ ಬೆಲೆಯನ್ನು ನಾವು ರೈತರಿಗೆ ಕೊಡುವಂತಹ ವ್ಯವಸ್ಥೆ ಮಾಡಿದರೆ ನಾವು ಅಂತರ್ ಜಲವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬಹುದು; ಜೊತೆಗೆ ಕೆರೆಗಳನ್ನು ದುರಸ್ತಿ ಮಾಡುವುದರಿಂದ, ಭಾವಿಗಳಲ್ಲಿ ನೀರು ಕಡಿಮೆಯಾಗುವುದಿಲ್ಲ. ಆದರೆ ಈ ಎರಡು ಕೆಲಸಗಳು ಒಟ್ಟಿಗೆಯಾಗಬೇಕು, ಕೆರೆ ದುರಸ್ತಿ ಮತ್ತು ಬಾವಿ ನೀರಿನ ಬಳಕೆ ಒಟ್ಟಿಗೆ ಆಗಬೇಕು. ಇದಕ್ಕೆ ಹಣವೆಲ್ಲಿದೆ ಎಂದು ತಾವು ಹೇಳಬಹುದು. ತಾವು ಒಂದೇ ಒಂದು ಕೆಲಸ ಮಾಡಬೇಕು, ಗಾಂಧೀಜಿಯವರನ್ನು ನೆನಪುಮಾಡಿಕೊಂಡರೆ ಸಾಕು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗುಲ್ಬರ್ಗಾ ಜಿಲ್ಲೆಯವರು. ಅಲ್ಲಿ ನೈಸರ್ಗಿಕ ಸಂಪತ್ತು ಏನಿದೆ ಅದು ಗುಲ್ಬರ್ಗಾ ಜಿಲ್ಲೆಯ ಸ್ವತ್ತು ಎನ್ನುವ ಒಂದು ತೀರ್ಮಾನಕ್ಕೆ ಬಂದರೆ ಸಾಕು; ಆಗ ಗುಲ್ಬರ್ಗಾ ಜಿಲ್ಲೆಯನ್ನು ಒಂದು ಜಪಾನ್ ಮಾಡಬಹುದು. ಕೇವಲ ಶಹಬಾದ್ ಕಲ್ಲಿನಿಂದ ಬರುತ್ತಿರುವ ದುಡ್ಡಿನಿಂದಲೇ ಗುಲ್ಬರ್ಗಾ ಜಿಲ್ಲೆಯ ಬರಗಾಲವನ್ನು ಪರಿಹಾರ ಮಾಡಬಹುದು. ಅದೇನೂ ಕಷ್ಟವಿಲ್ಲ. ಇದರಲ್ಲಿ ಯಾರೋ ಬೇರೆ ರಾಜ್ಯದವನು ಬಂದಿದ್ದಾನೆ. ಶಹಬಾದ್ ಕಲ್ಲಿನ ಜೊತೆ ಬೇರೆ ಕಲ್ಲನ್ನು ಉಪಯೋಗಿಸುವಂತ ಮನುಷ್ಯ. ಪ್ರತಿದಿವಸ ಗುಲ್ಬರ್ಗಾ ಜಿಲ್ಲೆಯ ನೈಸರ್ಗಿಕ ಸಂಪತ್ತು ಬೇರೆಯವರ ಸ್ವತ್ತಾಗುತ್ತಿದೆ. ಎ.ಸಿ.ಸಿ. ಫ್ಯಾಕ್ಟರಿ ನಿಮ್ಮಲ್ಲಿದೆ. ಮಹಾತ್ಮಾ ಗಾಂಧೀಜಿಯವರು ಹೇಳಿದ್ದು ಇಷ್ಟೇನೆ; ಏನೋ ಎರಡೂವರೆ ದಿವಸಗಳಿಂದ ಜಗಳಮಾಡುತ್ತಿದ್ದೇವೆ. ವಿಕೇಂದ್ರೀಕರಣ ಜಿಲ್ಲಾಪರಿಷತ್ ಮಸೂದೆ, ಏನೋ

ಬಹಳ ದೊಡ್ಡ ಸುಧಾರಣೆಯಾಗಿತ್ತು. ಈಗ ಅದು ಬಹಳ ಕೆಟ್ಟು ಹೋಗುತ್ತಿದೆ ಇತ್ಯಾದಿ ಇತ್ಯಾದಿ. ಏನು ವಿಕೇಂದ್ರೀಕರಣವಾಗಿದೆ? ವಿಕೇಂದ್ರೀಕರಣವೆಂದರೆ ಬರಿ ಅಧಿಕಾರ ವಿಕೇಂದ್ರೀಕರಣವಲ್ಲ; ಸಂಪತ್ತಿನ ವಿಕೇಂದ್ರೀಕರಣ ಕೂಡ ಆಗಬೇಕು. ಜೊತೆಗೆ ತಾಂತ್ರಿಕತೆ ವಿಕೇಂದ್ರೀಕರಣ ಆಗಬೇಕು. ಕೇವಲ ರಾಜಕೀಯ ವಿಕೇಂದ್ರೀಕರಣ ಅಲ್ಲ; ಆರ್ಥಿಕ ವಿಕೇಂದ್ರೀಕರಣ ಮತ್ತು ತಾಂತ್ರಿಕ ವಿಕೇಂದ್ರೀಕರಣವೇ ಒಟ್ಟಾರೆ ವಿಕೇಂದ್ರೀಕರಣದ ಅರ್ಥ; ಕೆಲವು ಮೂಲಭೂತವಾದ ಈ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಕೃಷಿ ಸಂಪತ್ತು ಮತ್ತು ನೈಸರ್ಗಿಕ ಸಂಪತ್ತು ಅಯಾಯ ಜಿಲ್ಲೆಗಳಲ್ಲಿ ಕನಿಷ್ಟ ನಮ್ಮ ಬಿಜಾಪುರ ಜಿಲ್ಲೆಯ ಸ್ನೇಹಿತರು ಇಲ್ಲಿ ಇದ್ದಾರೆ, ಹಾಯಂ ಬರಗಾಲ ಬಿಜಾಪುರ ಜಿಲ್ಲೆ; ಆದರೆ ಬಿಜಾಪುರ ಜಿಲ್ಲೆಯಲ್ಲಿ ಸಿಗುವಂಥ ಗ್ರಾನೈಟ್ ಕಲ್ಲು ಬಿಜಾಪುರದ್ದು ಎಂದು ಆದರೆ ಆ ಜಿಲ್ಲೆಯ ಬರಗಾಲವನ್ನು ನಾವು ಒಂದು ವರ್ಷದಲ್ಲಿಯೇ ಸರಿ ಮಾಡಬಹುದು. ಆ ಕಾನೂನು ಆಗಬೇಕು. ಅಂಥ ಕಾನೂನನ್ನು ಮಾಡುತ್ತೀರಾ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ಇಷ್ಟು ಕನಿಷ್ಟ ಬದಲಾವಣೆ ಮಾಡಿದರೆ ಶಾಶ್ವತವಾಗಿ ಬರ ಪರಿಹಾರವನ್ನು ಮಾಡಬಹುದು. ಇದೇನು ಕಷ್ಟದ ಕೆಲಸ ಅಲ್ಲ. ಸಣ್ಣ ಸಣ್ಣ ಕೆಲಸಗಳನ್ನು ಮಾಡಿ–ಸಣ್ಣ ಕೈಗಾರಿಕೆಗಳನ್ನು ಮಾಡಿ, ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿ. ಯಾರೋ ಕೆಲವು ಜನರ ಮನೆಯ ಸ್ವತ್ತಾಗುವ ನೈಸರ್ಗಿಕ ಸಂಪತ್ತನ್ನು ತಡೆಹಿಡಿಯಿರಿ. ಇವೆಲ್ಲ ಸಣ್ಣ ಕಾನೂನುಗಳಲ್ಲಿ ಆಗತಕ್ಕ ಕೆಲಸಗಳು. ಇಷ್ಟನ್ನು ಮಾಡಿದರೆ ಮುಂದಿನ ವರ್ಷ ಡಿಸೆಂಬರ್ ಒಳಗೆ ಬರಗಾಲ ಇಲ್ಲದಿರುವಂತಹ ಕರ್ನಾಟಕವನ್ನು ನಾವು ನೋಡಬಹುದು. ಅದು ಬಿಟ್ಟು ತಾವು ಕೊಟ್ಟಿರುವ ಒಂದು 3 ಪುಟದ ಹೇಳಿಕೆ ಏನಿದೆ, ಇದು ಕೇವಲ ನಿಮ್ಮ ಕೆಳಗಿರುವ ಬಿ.ಡಿ.ಒ. ಗಳ ಬಡತನ ನೀಗಿಸುವ ಒಂದು ಕಾರ್ಯಕ್ರಮ ಅಷ್ಟೇ ಹೊರತು ಬೇರೆ ಏನೂ ಅಲ್ಲ. ಇನ್ನು ನಾನು ಹೆಚ್ಚಿಗೆ ಹೇಳುವುದಿಲ್ಲ, ನಮಸ್ಕಾರ.

ಉಪಾಧ್ಯಕ್ಷೆಣೀಯವರು :– ವಾಟಾಳ್ ನಾಗರಾಜ್ ಅವರೇ ಮಾತನಾಡಿ. ನಾವು ಮೂರೂವರೆ ಗಂಟೆಗೆ ಸಭೆಯನ್ನು ಪ್ರಾರಂಭ ಮಾಡಿದ್ದೇವೆ, ಆದ್ದರಿಂದ 7 ಗಂಟೆಯವರೆಗೆ ಕೂರೋಣ.

ಶ್ರೀ ವಾಟಾಳ್ ನಾಗರಾಜ್ :– ಬೆಳಿಗ್ಗೆಯಿಂದ ಧರಣಿ ಎಲ್ಲ ಆಗಿದೆ. ನಾನು ನಾಳೆ ಮಾತನಾಡುತ್ತೇನೆ, ಈಗ ನನಗೆ ಸಾಕಾಗಿದೆ. ಎರಡು ನಿಮಿಷ ಬೇಕಾದರೆ ಮಾತನಾಡಿ ನಾಳೆ ಮುಂದುವರೆಸುತ್ತೇನೆ. ಈಗ ನಾನು ಮಾತನಾಡುವುದನ್ನು ಎಲ್ಲರೂ ತಾಳ್ಮೆಯಿಂದ ಕೇಳಿದರೆ ಮಾತನಾಡಬಹುದು. ಆದರೆ ಜಾತ್ರೆ ಮಾಡಿದ ಹಾಗೆ ಬೊಂಬಡಿ ಹೊಡೆದರೆ ಏನು ಮಾತನಾಡಲಿ.

ಉಪಾಧ್ಯಕ್ಷರು :– ಈಗ ಕೌಜಲಗಿಯವರು ಮಾತನಾಡಬಹುದು.

† ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷೆಣೀಯವರೆ, ಈ ವರ್ಷ ನಮ್ಮ ರಾಜ್ಯದಲ್ಲಿ ತೀವ್ರ ಹಾಗೂ ವ್ಯಾಪಕವಾದ ಬರಗಾಲ ಇರುವ ಪರಿಸ್ಥಿತಿಯಲ್ಲಿ ಇಂದು ನಾವು ಇಲ್ಲಿ ಸಭೆ ಸೇರಿದ್ದೇವೆ. 1966ರಲ್ಲಿ ಮತ್ತು 1986ರಲ್ಲಿ ಈ ರಾಜ್ಯದಲ್ಲಿ ಬರಗಾಲ ಬಂದಿತ್ತು. ತದನಂತರ ಇವತ್ತಿನ ದಿವಸ ನಾವು ಕರ್ನಾಟಕ ರಾಜ್ಯದಲ್ಲಿ ಮತ್ತೆ ಈ ಬರಗಾಲವನ್ನು ಕಾಣುತ್ತಿದ್ದೇವೆ. ಇವತ್ತಿನ ದಿವಸ ಶ್ರೀಮಾನ್ ಖರ್ಗೆಯವರು ಹೊಸದಾಗಿ ಈ ಒಂದು ಇಲಾಖೆಯನ್ನು ಪಹಿಸಿಕೊಂಡಿದ್ದಾರೆ. ನಾವು ಅವರಿಂದ ಬಹಳಷ್ಟು ಅಪೇಕ್ಷೆ ಹೊಂದಿದ್ದೇವೆ. ಏಕೆಂದರೆ ಬಹಳ ಪ್ರಮುಖವಾದ ಇಲಾಖೆ ಎಂದರೆ ಕಂದಾಯ ಇಲಾಖೆ. ಇಂಥ ಪರಿಸ್ಥಿತಿಯಲ್ಲಿ ಖರ್ಗೆಯವರು ಕಂದಾಯ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವುದು ನಮಗೆಲ್ಲ ಸಮಾಧಾನ. ಬಹಶಃ ಅವರು ನಮ್ಮೆಲ್ಲರನ್ನು ಸಮಾಧಾನ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆಂದು ನಾನಾದರೂ ಭಾವಿಸಿದ್ದೇನೆ. ಈ ವರ್ಷದ ಪ್ರಾರಂಭದಲ್ಲಿ, ಕೆಲವು ಕಡೆ ಅತೀ ಹೆಚ್ಚಿನ ಮಳೆ ಬಿದ್ದು ಭೀಕರ ಅನಾಹುತವಾಯಿತು, ನಂತರ ಸಾಕಷ್ಟು ಮಳೆಯಾಗದೆ ಕೆಲವು ಕಡೆ ಅತೀ ಬರಗಾಲವನ್ನು ನಾವು ಕಾಣುತ್ತಿದ್ದೇವೆ. ಈ ವೇಳೆಗಾಗಲೇ ನಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳಲ್ಲಿ ಹಾಗೂ ನೀರಾವರಿ ಬಾವಿಗಳಲ್ಲಿ ಸಾಕಷ್ಟು ನೀರು ಇಲ್ಲದಂತಾಗಿದೆ. ಇವತ್ತಿನ ದಿವಸ ಬರಗಾಲ ಬಂದಂತಹ ವೇಳೆಯಲ್ಲಿ ಉದ್ಯೋಗ ಒದಗಿಸುವುದು, ಕುಡಿಯುವ ನೀರಿನ ಪೂರೈಕೆ ಹಾಗೂ ಜಾನುವಾರುಗಳಿಗೆ ಮೇವು ಕೊಡುವುದು, ಸಾಕಷ್ಟು ಆಹಾರ ಪೂರೈಕೆ ಮಾಡುವ ಕೆಲಸಗಳನ್ನು ಮಾಡಬೇಕಾಗಬಹುದು. ಈ ಅಭಾವ ಪೀಡಿತ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಗರಿಷ್ಠ ಮಟ್ಟಕ್ಕೆ ಏರಿಸುವ ಪ್ರಯತ್ನವನ್ನು ರಾಷ್ಟ್ರೀಯ ಕಾರ್ಯಕ್ರಮಗಳ ಅಡಿಯಲ್ಲಿ ಮಾಡಬೇಕಾಗುತ್ತದೆ. ಅಭಾವ ಪೀಡಿತ ಪ್ರದೇಶಗಳಲ್ಲಿ ಇಂಥ

ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತೀ ಅವಶ್ಯಕ ಇದೆ ಎಂದು ಹೇಳುತ್ತೇನೆ. ಉದ್ಯೋಗ ಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾದುದರಿಂದ ಎಲ್ಲರಿಗೂ ಉದ್ಯೋಗ ದೊರಕಿಸಿಕೊಡುವುದು ಕೂಡ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದಕಾರಣ ಆ ದಿಸೆಯಲ್ಲಿ ಸರ್ಕಾರದವರು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ಸಲುವಾಗಿ ಸಮಸ್ಯಾತ್ಮಕ ಹಳ್ಳಿಗಳಲ್ಲಿ ಹೆಚ್ಚಿಗೆ ಈ ಕೊಳವೆ ಬಾವಿಗಳನ್ನು ತೋಡಿಸಿ ನೀರು ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಸಮಸ್ಯಾತ್ಮಕ ಹಳ್ಳಿಗಳ ಲಿಸ್ಟ್ ಬಹಳ ದಿವಸದ ಹಿಂದೆ ಆಗಿದೆ. ಆದ್ದರಿಂದ ಅದನ್ನು ಪುನರ್ ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ಈ ಊರಿನಲ್ಲಿ ಕುಡಿಯುವ ನೀರಿನ ತ್ರಾಸ ಬಹಳ ಇದೆ, ಸರಿಪಡಿಸಬೇಕು ಎಂದು ಹೇಳಿದಾಗ ಆ ಊರು ಸಮಸ್ಯಾತ್ಮಕ ಗ್ರಾಮದಲ್ಲಿ (ಪ್ರಾಬ್ಲಮೆಟಿಕ್ ವಿಲೇಜಸ್) ಸೇರಿರುವುದಿಲ್ಲ, ಆದ್ದರಿಂದ ಸಾಧ್ಯವಿಲ್ಲ ಎಂಬ ಧ್ವನಿ ಬರುತ್ತಿದೆ. ಆದಕಾರಣ ಆ ಲಿಸ್ಟನ್ನು ಪುನರ್ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಬೆಳಗಾಂ ಜಿಲ್ಲೆ ಬಗ್ಗೆ ಮೊದಲು ಹೇಳುತ್ತಿದ್ದೇನೆ. ಬೆಳಗಾಂ ಜಿಲ್ಲೆಗೆ 15–10–90ರವರೆಗೆ ರಾಜ್ಯ ಸರ್ಕಾರ 39 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಅದರಲ್ಲಿ 29 ಲಕ್ಷ ರೂಪಾಯಿಗಳು ಕುಡಿಯುವ ನೀರಿನ ಸಲುವಾಗಿ ಹಾಗೂ 10 ಲಕ್ಷ ರೂಪಾಯಿ ಉದ್ಯೋಗದ ಸಲುವಾಗಿ ಬಿಡುಗಡೆಯಾಗಿದೆ. 10 ಲಕ್ಷ ರೂಪಾಯಿಗಳನ್ನು ಉದ್ಯೋಗದ ಸಲುವಾಗಿ ಬಿಡುಗಡೆ ಮಾಡಿದರೂ, ಇವತ್ತಿನವರೆಗೂ ಒಂದು ಪೈಸೆ ಸಹ ಖರ್ಚು ಮಾಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅಲ್ಲಿ ಕುಡಿಯುವ ನೀರಿನ ತ್ರಾಸ ಇದ್ದರೂ ಕೂಡ 29 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೂ ಸಹ ಕೇವಲ 4 ಲಕ್ಷ 80 ಸಾವಿರ ರೂಪಾಯಿಗಳನ್ನು ಮಾತ್ರ ದಿನಾಂಕ 15–10–90ರವರೆಗೆ ಖರ್ಚು ಮಾಡಲಾಗಿದೆ. ಇದಕ್ಕೆ ಕಾರಣ ಸರ್ಕಾರ ಒಂದು ಆದೇಶ ನೀಡಿರುವುದು ಎಂದು ನನಗೆ ತಿಳಿದುಬಂದಿದೆ. ಏನೆಂದರೆ ಆದಷ್ಟು ಹೆಚ್ಚು ಹಣವನ್ನು ಖರ್ಚುಮಾಡಬೇಡಿ, ಆ ಹಣವನ್ನು ಹಾಗೇ ಇಟ್ಟು ನಂತರ ಬಿಡುಗಡೆ ಮಾಡಿ ಎಂದು ಹೇಳಿದ್ದಾರೆ ಎಂದು ಗೊತ್ತಾಗಿದೆ. ಪತ್ರಿಕೆಯಲ್ಲಿ ಒಂದು ಪ್ರಚಾರಕ್ಕೋಸ್ಕರವಾಗಿ ಇಂಥ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಬಹುದು. ರೇಡಿಯೋದಲ್ಲಿ ಪ್ರತಿದಿವಸ ನಾನು ಕೇಳುತ್ತಿದ್ದೇನೆ. ಶ್ರೀಯುತ ಕೆ.ಹೆಚ್. ಪಾಟೀಲರು ಹೇಳಿದರು ಹಣ ಬಿಡುಗಡೆ ಮಾಡುತ್ತಿದ್ದೇವೆ, 11 ಕೋಟಿ ರೂಪಾಯಿ ಬಿಡುಗಡೆ ಆಯಿತು ಎಂದು. ಅದೇ ಪ್ರಕಾರವಾಗಿ ಬೆಳಗಾಂ ಜಿಲ್ಲೆ ಡೆಪ್ಯೂಟಿ ಕಮಿಷನರ್‌ಗೆ ಒಂದು ಕಾಗದ ಬರೆದೆ. ಬೆಳಗಾಂ ಜಿಲ್ಲೆಯಲ್ಲಿ ಯಾವ ಯಾವ ಸ್ಥಳದಲ್ಲಿ ಬರಗಾಲ ಕಾಮಗಾರಿಗಳನ್ನು ಮಾಡಿರುತ್ತೀರಿ, ಈಗಾಗಲೇ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು. ನಾನು ವಿಧಾನ ಸಭೆಯಲ್ಲಿ ಒಂದು ಪ್ರಶ್ನೆ ಹಾಕಿದಮೇಲೆ ಈ ಹಣ ಬಿಡುಗಡೆಯಾಗಿದೆ. ವಿಧಾನ ಸಭೆಯಲ್ಲಿ ಸ್ಟಾರ್ಡ್ ಕ್ವಶ್ಚನ್ ಕಳುಹಿಸಿದ ಮೇಲೆ ಬಿಡುಗಡೆ ಮಾಡಿದ್ದಾರೆ. ತಾರೀಖು 24–4–1990ಕ್ಕೆ 15 ಲಕ್ಷ, ತಾರೀಖು 14–5–90ಕ್ಕೆ 4 ಲಕ್ಷ ರೂಪಾಯಿ, ತಾರೀಖು 9–11–90ಕ್ಕೆ 10 ಲಕ್ಷ ರೂಪಾಯಿ ಉದ್ಯೋಗದ ಸಲುವಾಗಿ ಬಿಡುಗಡೆ ಮಾಡಿದ್ದಾರೆ. ಕುಡಿಯುವ ನೀರಿಗೆ ಕೊಡತಕ್ಕ ಜಿಲ್ಲಾ ಪರಿಷತ್ ಹಣವನ್ನು ಡೈವರ್ಟ್ ಮಾಡಿ ಡೆಪ್ಯುಟಿ ಕಮಿಷನರ್‌ಗೆ ಕೊಟ್ಟು ಕಣ್ಣಿಗೆ ನೀರು ಒರೆಸುವ ಕಾರ್ಯಕ್ರಮ ಸರ್ಕಾರದವರು ಹಾಕಿಕೊಂಡಿದ್ದಾರೆ ಎಂದು ಹೇಳಬಹುದು. ಇವತ್ತಿನ ದಿವಸ ನಮ್ಮ ಜಿಲ್ಲೆಗೆ 10 ಲಕ್ಷ ರೂಪಾಯಿಗಳನ್ನು ಉದ್ಯೋಗಕ್ಕೆ ಕೊಟ್ಟಿದ್ದೀರಿ. 10 ಲಕ್ಷ ರೂಪಾಯಿ ಇದರ ಸಲುವಾಗಿ ಕೊಟ್ಟರೆ ಒಂದು ಸಾವಿರ ಜನರಿಗೆ ಕೇವಲ ಆರು ದಿವಸಗಳಿಗೆ ಕೆಲಸ ಕೊಟ್ಟಹಾಗೆ ಆಯಿತು. ಆರು ದಿವಸ ಕೆಲಸ ಕೊಟ್ಟರೆ, ಯಾವ ಪ್ರಕಾರ ಹೊರಗಿನ ಇಲಿಗಳಿಗೆ ಆಸೆ ತೋರಿಸುತ್ತಾರೋ ಆ ಪ್ರಕಾರ ಕೂಲಿಗಾರರಿಗೆ ಹಾಗೂ ಗ್ರಾಮೀಣ ಜನರಿಗೆ ಸರ್ಕಾರದವರು ಮೋಸ ಮಾಡಿದ್ದಾರೆ ಎಂದು ವಿಷಾದದಿಂದ ಹೇಳುತ್ತೇನೆ. ಇದು ನಡೆಯಬಾರದು. 10 ಲಕ್ಷ ರೂಪಾಯಿ ಕೊಟ್ಟರೂ ಏತಕ್ಕೆ ಆ ರೊಕ್ಕ ಖರ್ಚು ಮಾಡಿಲ್ಲ? ಬೆಳಗಾಂ ಜಿಲ್ಲೆಯಲ್ಲಿ ಏತಕ್ಕೆ ಒಂದೂ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಿಲ್ಲ? ಏನು ಕಾರಣ? ಬೆಳಗಾಂ ಜಿಲ್ಲೆಯಲ್ಲಿ ತಮ್ಮ ಲಿಸ್ಟ್ ಪ್ರಕಾರ ಮಳೆ ಸಕಾಲದಲ್ಲಿ ಬೀಳದೇ ಇರುವುದರಿಂದ 1990ನೇ ಸಾಲಿನಲ್ಲಿ ಏಳು ತಾಲ್ಲೂಕುಗಳನ್ನು ಸ್ಕೇರ್ಸಿಟಿ ಅಫೆಕ್ಟೆಡ್ ತಾಲ್ಲೂಕುಗಳು ಎಂದು ಡಿಕ್ಲೇರ್ ಮಾಡಿದೆ. 7 ತಾಲ್ಲೂಕುಗಳು ಸ್ಕೇರ್ಸಿಟಿ ಅಫೆಕ್ಟೆಡ್ ತಾಲ್ಲೂಕುಗಳು ಎಂದು ಹೇಳಿ ಇದುವರೆಗೂ ಒಂದು ಕೆಲಸವನ್ನೂ ಮಾಡಲಿಲ್ಲ. ಏಪ್ರಿಲ್‌ನಲ್ಲಿ 19 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗೆ ಬಿಡುಗಡೆ ಮಾಡಿ 15–10–

90ರವರೆಗೆ ಕೇವಲ 4 ಲಕ್ಷ 80 ಸಾವಿರ ರೂಪಾಯಿ ಕುಡಿಯುವ ನೀರಿಗಾಗಿ ಖರ್ಚು ಮಾಡಿದರೆ ಅರ್ಥ ಏನಿದೆ? ಡೆಪ್ಯುಟಿ ಕಮಿಷನರ್‌ಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಿ, ಹಣ ಖರ್ಚು ಮಾಡಬೇಡಿ, ಸರ್ಕಾರದಲ್ಲಿ ಹಣ ಇಲ್ಲ, ನಾವು ಪಬ್ಲಿಸಿಟಿ ಸಲುವಾಗಿ ಮಾಡಿದ್ದೇವೆ ಎಂದು. ಇವತ್ತಿನ ದಿವಸ ಡೆಪ್ಯುಟಿ ಕಮಿಷನರ್‌ಗೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಿಮ್ಮ ಪತ್ರಕ್ಕೆ ಅವರು ಅದೇ ರೀತಿ ಉತ್ತರ ಕೊಟ್ಟಿದ್ದಾರಾ? ತಮಗೆ ಗೊತ್ತಿರುವ ಹಾಗೆ 29 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗೆ ರಿಲೀಸ್ ಮಾಡಿದೆ. ಟೋಟಲ್ 49 ಲಕ್ಷ ನಿಮ್ಮ ಜಿಲ್ಲೆಗೆ ಕೊಟ್ಟಿದೆ. ಮತ್ತು ಪಾರ್ಟ್ಲಿ ಅಫೆಕ್ಟೆಡ್ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಇನ್‌ಸಫಿಶಿಯಂಟ್ ರೈನ್ ಎಂದು ಹೇಳಿದ್ದೇವೆ. ಇದಕ್ಕಿಂತಲೂ ವರ್ಸ್ಟ್ ತಾಲ್ಲೂಕುಗಳು ಬೇರೆ ಇವೆ.

ಶ್ರೀ ಎಸ್.ಹೆಚ್. ಕೌಜಲಗಿ :– ಅದಕ್ಕೆ ನಾನು ನಂತರ ಬರುತ್ತೇನೆ. ನಾನು ಇನ್ನೊಂದು ಪ್ರಶ್ನೆಯನ್ನು ನಾನು ಕೇಳಿದ್ದೆ. "ಹಾಗಿದ್ದಲ್ಲಿ, ಬೆಳಗಾಂ ಜಿಲ್ಲೆಯಲ್ಲಿ ಯಾವ ಯಾವ ಬರಗಾಲ ಕಾಮಗಾರಿಗಳ ಕೆಲಸ ಕೈಗೊಳ್ಳಲಾಗಿದೆ? ಕೆಲಸದ ಸ್ಥಳ, ಗ್ರಾಮಗಳ ಹೆಸರು, ಪೂರ್ಣ ವಿವರ ನೀಡುವುದು" ಎಂದು ಕೇಳಿದ್ದೆ. ಅದಕ್ಕೆ ಉತ್ತರ ಈ ರೀತಿ ಇದೆ. "ಜಿಲ್ಲಾ ಪರಿಷತ್ತಿನ ಮತಿಯಿಂದ ಅನೇಕ ಯೋಜನೆಗಳ ಅಡಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ." ಅಂದರೆ ಎನ್‌ಆರ್‌ಇಪಿ, ಜವಾಹರ್ ರೋಜ್‌ಗಾರ್ ಯೋಜನೆ ತೆಗೆದುಕೊಂಡಿರುವುದರಿಂದ ಈ ಬರಗಾಲ ಕಾಮಗಾರಿ ಇಲ್ಲ ಎಂದು ಉತ್ತರ ಕೊಡುತ್ತಾರೆ. ಡಿಪಿಎಆರ್ ನಲ್ಲಿ ಹೇಗೆ ತಮಗೆ ಉತ್ತರ ತಯಾರು ಮಾಡಲು ಇರುತ್ತಾರೋ ಆ ರೀತಿ ....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಹಾಗೆ ತಾವು ತಪ್ಪು ತಿಳಿದುಕೊಳ್ಳಬಾರದು. ಅದೂ ಕೂಡಾ ಕೆಲಸ ಅಲ್ಲವೇ? ಎಂಪ್ಲಾಯಿಮೆಂಟ್ ಒದಗಿಸುವುದಿಲ್ಲವೇ? ಜವಾಹರ್ ರೋಜ್ಗಾರ್ ಇರಬಹುದು, ಡಿಪಿಎಪಿ ಇರಬಹುದು, ರೆಗ್ಯುಲರ್ ಫಂಡ್‌ನಲ್ಲಿ ಇರಬಹುದು ...

ಶ್ರೀ ಎಸ್.ಹೆಚ್. ಕೌಜಲಗಿ :– ಹಾಗಿದ್ದರೆ ಯಾವ ಯಾವ ಬರಗಾಲ ಕಾಮಗಾರಿ ತೆಗೆದುಕೊಳ್ಳಲಾಗಿದೆ ಎನ್ನುವ ಪ್ರಶ್ನೆಗೆ ಇಲ್ಲ ಎಂದಿದ್ದರೆ ಆಗುತ್ತಾ ಇತ್ತು. ಬರಗಾಲ ಕಾಮಗಾರಿ ಬೇರೆ; ಜವಾಹರ್ ರೋಜ್ಗಾರ್ ಎಂದರೆ ನಮಗೆ ಗೊತ್ತಾಗುವುದಿಲ್ಲವೇ? ಪಶ್ಚಿಮ ಘಟ್ಟದ ಯೋಜನೆಗಳು ನಮಗೆ ಗೊತ್ತಿಲ್ಲವೇ? ಇಲ್ಲಿ ಇಲ್ಲ ಎನ್ನುವ ಹಾಗಿಲ್ಲ, ಆದ್ದರಿಂದ ಜವಾಹರ್ ರೋಜ್ಗಾರ್ ಯೋಜನೆಯಲ್ಲಿ ಕೆಲಸ ತೆಗೆದುಕೊಳ್ಳಲು ಆದೇಶ ನೀಡಲಾಗಿದೆ ಎಂದಿದ್ದಾರೆ. ಅದರ ಸಲುವಾಗಿ ಡಿಸಿಯವರಿಗೆ ಹಣ ಬಿಡುಗಡೆ ಮಾಡುವ ಉದ್ದೇಶ ಏನೆಂದರೆ, ಸರ್ಕಾರದಲ್ಲಿ ಬಿಡುಗಡೆ ಮಾಡುವ ಹಣ ಖರ್ಚು ಆಗಬಾರದು; ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡಿದ ಹಾಗೆ ತೋರಿಸಿರಬೇಕು; ಇದು ಸರಿಯಲ್ಲ. ಇವತ್ತು ಮಾನ್ಯ ಖರ್ಗೆಯವರು ಬೈಲುಹೊಂಗಲ ತಾಲ್ಲೂಕಿಗೆ ಬರಬೇಕು ಎಂದು ನಾನು ಹೇಳುತ್ತೇನೆ. ಆಲ್ಲಿನ ಜನ ಇವತ್ತು ತಮ್ಮ ಗೋವುಗಳನ್ನು ಕಟುಕರಿಗೆ ಕೊಟ್ಟು ಕೆಲಸ ಹುಡುಕಿಕೊಂಡು ಗೋವಾಕ್ಕೆ ಹೋಗುತ್ತಿದ್ದಾರೆ. ಇಂತಹ ಕಡೆ ಇವತ್ತು ಕೆಲಸಗಳನ್ನು ಒದಗಿಸಬೇಕು. ಪ್ರೊ: ನಂಜುಂಡಸ್ವಾಮಿಯವರು ಹಾಗೂ ಬಾಬಾಗೌಡ ಪಾಟೀಲರು ಯಾವ ಪ್ರಕಾರ ಬರಗಾಲವನ್ನು ಗುರ್ತಿಸುತ್ತೀರಿ ಎಂದು ಕೇಳಿದರು. ಮಳೆ, ಅಣೇವಾರಿ, ಕುಡಿವ ನೀರಿನ ಲಭ್ಯತೆ, ಮೇವಿನ ಲಭ್ಯತೆ, ಕೃಷಿ ಕಾರ್ಮಿಕರಿಗೆ ಸಿಗಬೇಕಾದ ಕೆಲಸ ನೋಡಿ ಎಂದು ಹೇಳುತ್ತೀರಿ. ಇವತ್ತು ಮಳೆಯ ಬಗ್ಗೆ ಹೇಳುವುದಾದರೆ ಯಾವ ಕಾಲಕ್ಕೆ ಮಳೆ ಬೇಕು ಆ ಕಾಲಕ್ಕೆ ಬಿದ್ದ ಮಳೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಏಪ್ರಿಲ್, ಮೇನಲ್ಲಿ ಅತಿ ಹೆಚ್ಚು ಮಳೆಯಾಯಿತು. ಇದರಿಂದ ಏನು ಉಪಯೋಗ? ಜೂನ್, ಜುಲೈನಲ್ಲಿ ಮಳೆಯಾದರೆ ಪತ್ತಿಗೆ ಉಪಯೋಗವಾಗುತ್ತದೆ. ಮುಂದೆ ಆಗಸ್ಟ್ ಸೆಪ್ಟೆಂಬರ್‌ನಲ್ಲಿ ಮಳೆ ಬೇಕು. ಆಗ ಆಗದೇ ಇದ್ದರೆ ಏನೂ ಉಪಯೋಗವಾಗುವುದಿಲ್ಲ. ಒಮ್ಮೆ ಮಳೆಯಾಯಿತು ಎಂದರೆ ಅದು ಲೆಕ್ಕಕ್ಕೆ ಬರುತ್ತದೆ. ಬ್ರಿಟಿಷರ ಕಾಲದಲ್ಲಿ ಇದ್ದಹಾಗೆ ರೈನ್ ಗೇಜ್ ತಹಶೀಲ್ದಾರರ ಹಿತ್ತಲಲ್ಲಿ, ಡಿಸಿಯವರ ಹಿತ್ತಲಲ್ಲಿ ಇರುತ್ತವೆ. ಅವರು ಅದನ್ನು ಅಳೆದು ತಮಗೆ ರಿಪೋರ್ಟ್ ಕಳುಹಿಸುತ್ತಾರೆ. ಇಂತಹ ರಿಪೋರ್ಟ್ ನೋಡಿ ನೀವು ಇಲ್ಲಿ ಉತ್ತರ ಹೇಳುತ್ತೀರಿ. ಡಿಸಿಬೆಚ್ ಹತ್ತಿ ಬೆಳೆಗೆ ನಿಜವಾಗಿಯೂ ....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಪ್ರೊ. ನಂಜುಂಡಸ್ವಾಮಿಯವರು, ಈ ಹಿಂದೆ ಗೆಜೆಟಿಯರ್ ನೋಡಿ ಮೈನರ್ ಇರಿಗೇಷನ್ ವರ್ಕ್ಸ್ ಹೇಗೆ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದನ್ನು ಬ್ರಿಟಿಷರು ಮಾಡಿದ್ದಲ್ಲವೇ? ಅದನ್ನು ಒಪ್ಪಿಕೊಳ್ಳುತ್ತೀರಿ ಇದನ್ನು ಒಪ್ಪಿಕೊಳ್ಳುವುದಿಲ್ಲ ಎಂದರೆ ಹೇಗೆ?

Prof. M.D. Nanjundaswamy :- I am going to clarify the point. ನಮ್ಮ ಪೂರ್ವಜರು ಏನು ಮಾಡಿದರು ಅದನ್ನು ನೋಡಿ ಅವರಿಗೆ ಒಂದು ಹೊಸ ಕೆರೆಯನ್ನೂ ಮಾಡುವುದಕ್ಕೂ ಜಾಗ ಸಿಗದೇ ಇರುವ ರೀತಿಯಲ್ಲಿ ಪೂರ್ತಿ ಕಾರ್ಯಕ್ರಮ ಮಾಡಿ ಆಗಿತ್ತು. ಅದನ್ನು ರೆಕಾರ್ಡ್ ಮಾಡಿದ್ದಾರೆ ಅಷ್ಟೇ; ಬ್ರಿಟಿಷರು ಮಾಡಿದ ಕೆರೆಗಳಲ್ಲ ಅವು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ತಮಗೆ ಹೇಳುವುದಾದರೆ, ನಮ್ಮ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಇವತ್ತು ಯಾವುದೇ ಸರ್ಕಾರ ಸಹಿತ ಹೆಚ್ಚಿನ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ನಿಮ್ಮ ಸರ್ಕಾರ ಇರಬಹುದು, ಹಿಂದೆ ನಮ್ಮ ಸರ್ಕಾರ ಇದ್ದಿರಬಹುದು. ಯಾರೇ ಇದ್ದರೂ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಇದ್ದ ಹಣಕಾಸಿನ ಪರಿಸ್ಥಿತಿಯಲ್ಲಿ ಯಾವ ಪ್ರಕಾರವಾಗಿ ಯೋಗ್ಯವಾದ ಕೆಲಸ ಕಾರ್ಯಗಳನ್ನು ಮಾಡುವುದು ಮುಖ್ಯ ಕರ್ತವ್ಯ. ಇವೊತ್ತು ಎಷ್ಟೇ ರೊಕ್ಕ ಕೊಟ್ಟರೂ ಸಹಿತ ಅದು ಸಾಲುವುದಿಲ್ಲ. ಆದ್ದರಿಂದ ಶಾಶ್ವತವಾದ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದು ಬಹಳ ಮುಖ್ಯ. ಅದರಲ್ಲಿ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಐದು ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ತಾವು ತೆಗೆದುಕೊಂಡಲ್ಲಿ ಶಾಶ್ವತವಾಗಿ ಬರಗಾಲ ಹೋಗುತ್ತದೆಂದು ತಮಗೆ ಹೇಳಬಹುದು. ಮೊದಲಿಗೆ ಮಾನ್ಯ ಪುಟ್ಟಸ್ವಾಮಿ ಗೌಡರು ಇದ್ದಾಗ ಕೃಷ್ಣಾ ಬೇಸಿನ್‌ನ ಸರ್ವೆ ಮಾಡಲು ಬಿಜಾಪುರದಲ್ಲಿರುವ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ಸಂಗೊಳ್ಳಿ, ಬೇವಿನಕೊಪ್ಪಲು ಮತ್ತು ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ಮೊಟೊಳ್ಳಿ, ಏಣಗಿ ಈ ಐದು ಊರುಗಳು ಮಲಪ್ರಭಾ ಯೋಜನೆಯ ಕಾಮಂಡ್ ಏರಿಯಾದಲ್ಲಿ ಬರುತ್ತವೆ. ಇವು ಐದು ಸಹಿತ ಕಾಮಂಡ್ ಏರಿಯಾದಲ್ಲಿ ಬಂದರೂ ಸಹಿತ ಒಂದು ಲಿಫ್ಟ್ ಇರಿಗೇಷನ್ ಇಲ್ಲ. ಲಿಫ್ಟ್ ಇರಿಗೇಷನ್‌ನಿಂದ ನೀರು ಕೊಟ್ಟರೂ ಸಹ ರೈತರ ಹೊಲಗಳಿಗೆ ನೀರು ಹೋಗಬೇಕಾದರೆ 23 ಕಿಲೋಮೀಟರ್ ದೂರ ಹೋಗಬೇಕು. ರೈತರಿಗೆ ನೀರಿನ ಸೌಕರ್ಯ ಸಿಗುವ ಹಾಗೆ ಇಲ್ಲ. ಏಕೆಂದರೆ ಒಂದು ಲಿಫ್ಟ್ ಇರಿಗೇಷನ್ ಯಂತ್ರ ವಿದ್ಯುತ್ ಅಡಚಣೆಯಿಂದ ನಿಂತುಹೋಯಿತು ಅಂದರೆ ಮತ್ತೆ ಪುನಃ ಚಾನಲ್‌ನಲ್ಲಿ ಮೂರು ದಿವಸ ನೀರು ಬರುವುದಿಲ್ಲ. ಆದಕ್ಕೋಸ್ಕರ ಬಾಳೆಕುಂದ್ರಿಯವರು ಇನ್ಸ್‌ಪೆಕ್ಷನ್ ಮಾಡಿ ತಮ್ಮ ಇನ್ಸ್‌ಪೆಕ್ಷನ್ ನೋಟ್‌ನಲ್ಲಿ ಹೊಸ ಐದು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಈ ಮೇಲೆ ಹೇಳಿದ ಕಡೆಗಳಲ್ಲಿ ಮಾಡಬೇಕೆಂದು ಹೇಳಿದ್ದಾರೆ. ಲಿಫ್ಟ್ ಇರಿಗೇಷನ್ ರೂಲ್ಸ್ ಪ್ರಕಾರ ರೈತರು ನಡೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಆದ್ದರಿಂದ ತಾವು ದಯಮಾಡಿ ತಮ್ಮ ಕಾಲದಲ್ಲಿ ಅದಕ್ಕೆ ಪ್ಲಾನ್ ಎಸ್ಟಿಮೇಟ್ ಮಾಡಿಸಿ ಆ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಮಂಜೂರು ಮಾಡಬೇಕು. ಈ ಐದು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಮಂಜೂರು ಮಾಡಿಕೊಟ್ಟರೆ, ಯಾವುದೇ ಬರಗಾಲ ಕಾಮಗಾರಿಗಳನ್ನು ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ತೆಗೆದುಕೊಳ್ಳುವ ಪ್ರಸಂಗ ಬರುವುದಿಲ್ಲ. ತಮ್ಮ ಹೆಸರು ಕಡೆಯತನಕ ನಮ್ಮ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಜನರು ಮಾನ್ಯ ಖರ್ಗೆಯವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಮತ್ತು ಪುಟ್ಟಸ್ವಾಮಿಗೌಡರ ಲೆಟರ್ ಪ್ರಕಾರ ಮಾಡಲಾಗಿದೆಯೆಂದು ತಮ್ಮ ಹೆಸರು ಕಡೆಯತನಕ ಉಳಿಯುತ್ತದೆಂದು ನಾನು ಹೇಳುತ್ತೇನೆ. ತಮ್ಮ ಸರ್ಕಾರದಲ್ಲಿ ಹಣದ ಅಡಚಣೆ ಇದ್ದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಅಲ್ಲಿರುವ ವ್ಯವಸಾಯ ವಿಸ್ತರಣಾಧಿಕಾರಿಗಳು, ಲಿಫ್ಟ್ ಇರಿಗೇಷನ್ ಮಾಡಲಿಕ್ಕೆ ಪ್ಲಾನ್ ಎಸ್ಟಿಮೇಟ್ ಮಾಡಿಸಿ ಫಿಸಿಬಲಿಟಿ ಇದ್ದರೆ ನಾವು ಹಣ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಲೋನ್ ಕೊಡುವುದಕ್ಕೆ ತಯಾರಾಗಿದ್ದಾರೆ. ಆದ್ದರಿಂದ ತಾವು ದಯಮಾಡಿ ಐದು ಲಿಫ್ಟ್ ಇರಿಗೇಷನ್‌ಗಳಿಗೆ ಪ್ಲಾನ್ ಎಸ್ಟಿಮೇಟ್ ಮಾಡಿಸಿ ರೈತರಿಗೆ ನೀರು ಒದಗಿಸುವ ಕೆಲಸ ಮಾಡಿದರೆ ಅವರು ಲೋನ್ ಕೊಡುವುದಕ್ಕೆ ತಯಾರಾಗಿದ್ದಾರೆ. ಅವರು ಸರ್ಕಾರದಿಂದ ಹಣವನ್ನು ಕೇಳುವುದಿಲ್ಲ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಲೋನ್ ತೆಗೆದುಕೊಂಡು ಮಾಡುವುದಕ್ಕೆ ತಯಾರಾಗಿದ್ದಾರೆ. ಶುಗರ್ ಫ್ಯಾಕ್ಟರಿ ಕಾಮಂಡ್ ಏರಿಯಾದಲ್ಲೇ ಬರುವುದರಿಂದ ಶುಗರ್ ಫ್ಯಾಕ್ಟರಿಯವರು ಸಹಾಯ ಮಾಡುವುದಕ್ಕೆ

ತಯಾರಾಗಿದ್ದಾರೆ. ಆದ್ದರಿಂದ ತಾವು ದಯಮಾಡಿ ಆದಷ್ಟು ಬೇಗ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನಿಂದ ಇವುಗಳನ್ನು ಸರ್ವ ಮಾಡಿಸಬೇಕೆಂದು ನಾನು ಹೇಳುತ್ತಿದ್ದೇನೆ. ಎಂ.ಕೆ. ಹುಬ್ಬಳ್ಳಿಯ ಹತ್ತಿರ ಒಂದು ಕೆರೆ ಇದೆ. ಆ ಕೆರೆಯಿಂದ 12 ಸಾವಿರ ಎಕರೆ ನೀರಾವರಿಯಾಗುತ್ತದೆ. ಆ ಕೆರೆಯಲ್ಲಿ ಹೂಳು ತುಂಬಿದೆ. ಹೂಳು ತೆಗೆಸುವ ಸಲುವಾಗಿ 18 ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ. ಪುಟ್ಟಸ್ವಾಮಿಗೌಡರು ಇದ್ದಾಗ ಎಸ್ಟಿಮೇಟ್ ಮಾಡಿಸಿದ್ದಾರೆ. ಆ ಕೆರೆಯಿಂದ 12 ಸಾವಿರ ಎಕರೆ ನೀರಾವರಿಯಾಗುತ್ತದೆ. ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡಲಿಕ್ಕೆ ಬ್ಯಾಂಕ್‌ನವರು ಹಣ ತುಂಬುವುದಕ್ಕೆ ತಯಾರಾಗಿದ್ದಾರೆ. ಫಿಸಿಬಲಿಟಿ ಎಂದು ಹೇಳಿದರೆ ರೈತರು ಒಂದು ಸೊಸೈಟಿ ಮಾಡಿಕೊಂಡು ಕೆಲಸ ಶುರು ಮಾಡುತ್ತಾರೆ. ಆ ಭಾಗದ ಜನರಿಗೆ ಉದ್ಯೋಗ ಕೊಟ್ಟ ಹಾಗೆ ಆಗುತ್ತದೆ. ಇದರಿಂದ 12 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಆದ ಕಾರಣ ಕೂಡಲೇ ಆ ಭಾಗದ ಜನರಿಗೆ ಉದ್ಯೋಗ ಕೊಡುವ ಸಲುವಾಗಿ ಮಲಪ್ರಭಾ ಕಾಡಾ ಏರಿಯಾದಲ್ಲಿ ರಸ್ತೆಗಳು ಬರುತ್ತವೆ. ಆ ರಸ್ತೆಗಳು ಇದುವರೆಗೆ ರಿಪೇರಿಯಾಗಿರುವುದಿಲ್ಲ. ಕಾಡಾದಲ್ಲಿ ರೊಕ್ಕ ಇದೆ. ಆ ರೊಕ್ಕವನ್ನು ಬೆಳಗಾಂ ಬ್ಯಾಂಕ್‌ನಲ್ಲಿ ಎಫ್‌ಡಿಯಲ್ಲಿಟ್ಟಿದ್ದಾರೆ. ಅವರಿಗೆ ಈ ಹಣದಿಂದ ರಸ್ತೆ ಕೆಲಸಗಳನ್ನು ಮಾಡಲಿಕ್ಕೆ ತಿಳಿಸಬೇಕು. ತಾವು ಹೆಚ್ಚಿಗೆ ರೊಕ್ಕವನ್ನು ಸರ್ಕಾರದಿಂದ ಕೊಡುವುದು ಬೇಡ. ನಮ್ಮ ರೊಕ್ಕವನ್ನು ನಮಗೆ ಕೊಡಬೇಕು. ಅಡ್ಮಿನಿಸ್ಟ್ರೇಟರ್ ಕಾಡಾ ಮಲಪ್ರಭಾ ವಿಭಾಗ ಬೆಳಗಾಂ, ಅವರು ರೊಕ್ಕವನ್ನು ಬ್ಯಾಂಕುಗಳಲ್ಲಿ ಎಫ್.ಡಿ. ಇಟ್ಟಿದ್ದಾರೆ. ಆ ಹಣವನ್ನು ಮಲಪ್ರಭ ಏರಿಯಾದಲ್ಲಿ ಬರತಕ್ಕ ರಸ್ತೆಗಳ ರಿಪೇರಿ ಮಾಡುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷೆಣೀಯವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :– ಈಗ ಸಭೆ ಮುಂದುವರೆದು ನಾಳೆ ಬೆಳಿಗ್ಗೆ ಪುನಃ 9–30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು 6 ಘಂಟೆ 55 ನಿಮಿಷಗಳಿಗೆ ಮುಕ್ತಾಯವಾಗಿ, ಪುನಃ 30ನೇ ನವೆಂಬರ್ ಮಾಹೆ 1990ರ ಶುಕ್ರವಾರದಂದು ಬೆಳಿಗ್ಗೆ 9–30 ಗಂಟೆಗೆ ಸೇರಲು ನಿಶ್ಚಯಿಸಿತು.)

(† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)